ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 28 | ಜುಲೈ 13, 1980 | ಬೆಲೆ : 50 ಪೈಸೆ

ಕಂಪೂಚಿಯಾಕ್ಕೆ ಮಾನ್ಯತೆ

ಕಂಪೂಚಿಯಾದ ಹೆಂಗ್ ಸಮರಿನ್‌ರವರ ಸರಕಾರಕ್ಕೆ ಮಾನ್ಯತೆ ನೀಡುವುದಾಗಿ ಭಾರತ ಸರಕಾರ ಘೋಷಿಸಿರುವುದನ್ನು ನಾವು ಸ್ವಾಗತಿಸುತ್ತೇವೆ, ವಿಯತ್ನಾಂ ಸರಕಾರ ಅಮೇರಿಕವನ್ನು ಸಂಪೂರ್ಣ ಸೋಲಿಸಿ ತಮ್ಮ ದೇಶವನ್ನು ವಿಮೋಚನೆಗೊಳಿಸಿದ ಬಳಿಕ ಕಂಪೂಚಿಯಾದಲ್ಲೂ ವಿಮೋಚನಾ ಹೋರಾಟ ಯಶಸ್ವಿಗೊಂಡು ಖೇಮರ್ ರೂಜ್ ಆಡಳಿತೆ ಬಂತು. ಆದರೆ ಪಾಲ್‌ಪಾಟ್‌ರ ನೇತೃತ್ವದಲ್ಲಿದ್ದ ಸರಕಾರ ತನ್ನದೇ ಆದ ನೀತಿಯನ್ನನುಸರಿಸುತ್ತಾ ಜನತೆಯ ಮೇಲೆ ತೀವ್ರ ದಬ್ಬಾಳಿಕೆಯನ್ನು ನಡೆಸಲಾರಂಭಿಸಿತು, ಅದರಿಂದ ಬೇಸತ್ತ ಜನ ಹೆಂಗ್ ಸಮಾರಿನ್‌ರವರ ನೇತೃತ್ವದಲ್ಲಿ ಸರಕಾರದ ವಿರುದ್ಧ ಸಶಸ್ತ್ರ ಹೋರಾಟ ಆರಂಭಿಸಿತು. ಅದಕ್ಕೆ ಜನತೆಯು ಬೆಂಬಲವಿತ್ತು. ಇದು ವಿಸ್ತೃತಗೊಂಡು ಬೆಳೆದು ಬಂದಾಗ ಅದು ವಿಯತ್ನಾಂ ಸರಕಾರದ ಬೆಂಬಲಕೋರಿತು, ಕೆಲವೇ ದಿವಸದಲ್ಲಿ ಪಾಲ್‌ಪಾಟ್‌ಗೆ ಸಂಪೂರ್ಣ ಸೋಲಾದಿ ಅವರೆಲ್ಲ ದೇಶ ಬಿಟ್ಟು ಹೋಗಬೇಕಾಯಿತು. ಹೆಂಗ್ ಸಮರಿನ್‌ರವರ ನೇತೃತ್ವದಲ್ಲಿ ಹೊಸ ಸರಕಾರ ಸ್ಥಾಪನೆಯಾದಿ ಜನತೆಯ ಬೆಂಬಲಪಡೆದು ಅಧಿಕಾರ ನಡೆಸಿಕೊಂಡು ಬರುತ್ತಿದೆ,

ಸಂಪಾದಕೀಯ

ಪದಚ್ಯುತಿಗೊಂಡ ಗುಂಪಿಗೆ ಚೈನಾ ಬೆಂಬಲ ನೀಡುತ್ತಿದ್ದು ಹೆಂಗ್ ಸಮರಿನ್ ಸರಕಾರವನ್ನು ಅದು ವಿರೋಧ ಮಾಡುತ್ತಿರುವುದು ಆಶ್ಚರ್ಯಕರವಾಗಿದೆ. ಆಗ್ನೇಯ ಏಷಿಯಾದ ರಾಷ್ಟ್ರಗಳೂ ಇತರ ಸಾಮ್ರಾಜ್ಯಶಾಹಿ ರಾಷ್ಟ್ರಗಳೂ ಹೆಂಗ್ ಸಮರಿನ್ ಸರಕಾರಕ್ಕೆ ಮನ್ನಣೆ ನೀಡಿಲ್ಲ, ಈ ಸರಕಾರವು ವಿಯತ್ನಾಂ ಸೈನ್ಯದ ಬಲವನ್ನವಲಂಬಿಸಿಕೊಂಡು ಅಧಿಕಾರದಲ್ಲಿರುವುದರಿಂದ ಅದಕ್ಕೆ ಬೆಂಬಲ ಕೊಡಲಾಗದೆಂದು ಅವರವಾದ. ಈಗ ಭಾರತವೂ ಸೇರಿ ಒಟ್ಟು 31 ರಾಷ್ಟ್ರಗಳಷ್ಟೇ ಕಂಪೂಚಿಯಾಕ್ಕೆ ಮನ್ನಣೆ ನೀಡಿವೆ. ತಡವಾದಿಯಾದರೂ ಸರಕಾರ ಕೈಗೊಂಡ ತೀರ್ಮಾನವು ಸ್ವಾಗತಾರ್ಹವಾಗಿದೆ. ಇದು ಇತರ ದೇಶಗಳ ಮೇಲೂ ಪರಿಣಾಮಬೀರಿ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುವುದೆಂದು ನಾವು ನಂಬಿದ್ದೇವೆ. ಚೀನವೂ ಸಹ ತನ್ನ ಧೋರಣೆಯನ್ನು ಬದಲಾಯಿಸಿ ವಿಯತ್ನಾಂ, ಕಂಪೂಚಿಯಾ, ಲಾವೋಸ್ ಸರಕಾರಗಳ ಜೊತೆಗೆ ಸೇರಿಕೊಂಡರೆ ಆಗ್ನೇಯ ಏಷಿಯಾದಲ್ಲಿ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸೋಲಿಸಲಿಕ್ಕೂ, ಯುದ್ಧಪ್ರಚೋದನೆಗಳನ್ನೆದುರಿಸಲಿಕ್ಕೂ, ಈ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೂ ಸಹಾಯಕವಾಗುವುದು. ○

ಪಕ್ಷ ಮತ್ತು ಟ್ರೇಡ್‌ಯೂನಿಯನ್ ಒಂದೇ ಅಲ್ಲ

—ಇ. ಎಂ. ಎಸ್.

ನಂಬೂದಿರಿಪಾಡ್ ಅವರನ್ನು ಕಾಣಲು ನಸುಕು ಹರಿಯುವ ಹೊತ್ತಿಗೆ ಹೊರಟಾಗ ಹೂಮರಗಳನ್ನು ಹೊತ್ತ ರಸ್ತೆಗಳೆಲ್ಲ ಮಲಗಿದ್ದವು. ಆದರೆ ಇ. ಎಂ. ಎಸ್. ಎದ್ದು ಎಷ್ಟೋ ಹೊತ್ತಾಗಿತ್ತು. ಬೆಳಗಿನ ಕಾಫಿ ಮುಗಿಸಿ ಅಂದಿನ ದಿನಪತ್ರಿಕೆಗಳಲ್ಲಿ ತಲ್ಲೀನರಾಗಿದ್ದ ಎಪ್ಪತ್ತು ದಾಟಿದ ಈ ವ್ಯಕ್ತಿಯ ಚುರುಕುತನಕ್ಕೆ ಆಶ್ಚರ್ಯವಾಯಿತು. ಅನೇಕ ವರ್ಷಗಳ ಕಾಲ ವಿಧಾನಸಭಾ ಸದಸ್ಯರಲ್ಲದೆ ಒಂದು ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದ ಶಂಕರನ್ ನಂಬೂದಿರಿಪಾಡರಲ್ಲಿ ರಾಜಕಾರಣಿಯ ಯಾವುದೇ ಸೋಗುಗಳಿಲ್ಲ. ಒಬ್ಬ ನಿಷ್ಠಾವಂತ ಕಮ್ಯುನಿಸ್ಟ್, ಕಾರ್ಯಕರ್ತನ ಸರಳತೆ ಅವರಿಗೆಹುಟ್ಟುಗುಣವೇ ಆಗಿರಬಹುದೆನ್ನಿಸುತ್ತದೆ. ಯಾವುದೇ ವಿಚಾರವಿರಲಿ ಅವರು ನೀಡುವ ಖಚಿತವಾದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಅವರ ಅಪಾರ ಅನುಭವ, ನೆಚ್ಚಿದ ಸಿದ್ಧಾಂತದ ಬಗ್ಗೆ ಸ್ಪಷ್ಟಕಲ್ಪನೆ, ತಮ್ಮ ಪಕ್ಷದ ರಾಜಕೀಯ ಜವಾಬ್ದಾರಿ ಇವೆಲ್ಲ ತುಂಬಿಕೊಂಡಿರುತ್ತವೆ. ಮಾತನಾಡುವ ಉತ್ಸಾಹಕ್ಕೆ ಅವರ ಉಗ್ಗು ಎಂದೂ ತೊಡಕಾಗಿಲ್ಲ.

ಐಕ್ಯರಂಗ ಸಂದರ್ಶನ

ಮಾರ್ಕ್ಸ್‌ವಾದದ ತವರುಮನೆ ಜರ್ಮನಿ ಹಿಟ್ಲರನ ಬೂಟುಗಳಡಿಯಲ್ಲಿ ನರಳಿತು. ಬ್ರಿಟನ್ನಿನ ಜನಸಂಖ್ಯೆಯ ಹೆಚ್ಚುಪಾಲು ಕೈಗಾರಿಕಾ ಕಾರ್ಮಿಕರೆ, ಈ ಸುಧಾರಿತ ಕಾರ್ಮಿಕವರ್ಗ ಮತ್ತು ಅವರ ಸುಧಾರಿತ ಸಂಸದೀಯ ಪ್ರಜಾಪ್ರಭುತ್ವಗಳು ಒಂದುಗೂಡಿ ಶಾಂತಿಯುತವಾದಿ ಸಮಾಜವಾದ ಬರಬಹುದೆಂದು ಎಂಗೆಲ್ಸ್ ಆಶಿಸಿದ್ದರು. ಆದರೆ ಬ್ರಿಟನ್ನಿನ ಚುನಾವಣೆಯ ಎಲ್ಲ ಕ್ಷೇತ್ರಗಳಲ್ಲೂ ಅಲ್ಲಿನ ಕಮ್ಯುನಿಸ್ಟರಿಗೆ ಅತಿ ಕಡಿಮೆ ಮತಗಳು ಬಿದ್ದವು. ಬ್ರಿಟನ್ನಿನ ಕಮ್ಯುನಿಸ್ಟ್ ಚಳುವಳಿ ಹಿಂದೆ ಬಿದ್ದಿದೆ ಎಂದು ಹೇಳುವಂತಿಲ್ಲ. ಅಲ್ಲಿ ಕಮ್ಯುನಿಸ್ಟರು ಭಾರಿ ಹೋರಾಟಗಳನ್ನು ನಡೆಸಿದ್ದಾರೆ. ಅಲ್ಲಿನ ಟ್ರೇಡ್ ಯೂನಿಯನ್‌ಗಳು ಒಂದು ದೊಡ್ಡ ಶಕ್ತಿಯಾದಿ ನೆಲೆಗೊಂಡಿವೆ. ಇಲ್ಲಿನ ಟ್ರೇಡ್‌ಯೂನಿಯನ್ ಚಳುವಳಿ ಇನ್ನಷ್ಟು ಬಲಗೊಳ್ಳಬೇಕು ಎಂದು ಇ. ಎಂ. ಎಸ್. ಹೇಳುತ್ತಾರೆ, ಮೂರು ರಾಜ್ಯಗಳಲ್ಲಿ ಬಹು

(ಕಡೆಯ ಪುಟ ನೋಡಿ)

ಕೇಂದ್ರಸಮಿತಿ ಸಭೆ

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಕರ್ತವ್ಯಗಳು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸಭೆಯು 1980ರ ಜೂನ್ 26ರಿಂದ 29ರ ವರೆಗೆ ನವದೆಹಲಿಯಲ್ಲಿ ನಡೆಯಿತು. ಕೇರಳದ ಉನ್ನತ ನಾಯಕ ಕಾಂ. ಎ. ವಿ. ಕುಂಞಂಬು ಮತ್ತು ಪ. ಬಂಗಾಳದಲ್ಲಿ ಕಾಂಗ್ರೆಸ್ ಗೂಂಡಾಗಳಿಂದ ಕೊಲೆಯಾದ, ಕೇರಳದಲ್ಲಿ ಕಾಂಗ್ರೆಸ್–ಆರೆಸ್ಸೆಸ್ ಅಂಶಗಳಿಂದ ಕೊಲೆಯಾದ ಮತ್ತು ಆಂಧ್ರದಲ್ಲಿ ಕಾಂಗ್ರೆಸ್ ಪ್ರೇರಿತ ನಕ್ಸಲ್‌ವಾದಿಗಳಿಂದ ಸಾವಪ್ಪಿದ ಪಕ್ಷದ ಹುತಾತ್ಮರಿಗೆ ಕೇಂದ್ರಸಮಿತಿ ಶ್ರದ್ಧಾಂಜಲಿ ಸಲ್ಲಿಸಿತು.

ಅಂಗೋಲದ ಮೇಲೆ ದಬ್ಬಾಳಿಕೆ ನಡೆಸಿದ ದ. ಆಫ್ರಿಕದ ಬಿಳಿಆಡಳಿತವನ್ನು ಕೇಂದ್ರಸಮಿತಿ ಖಂಡಿಸಿತು. ಜನಾಂಗವಾದಿ ದ. ಆಫ್ರಿಕದ ಆಡಳಿತ ವಿರುದ್ಧ ಅಂಗೋಲ ನಡೆಸುತ್ತಿರುವ ಹೋರಾಟಕ್ಕೆ ಕೇಂದ್ರಸಮಿತಿ ತನ್ನ ಪೂರ್ಣ ಬೆಂಬಲವನ್ನು ಸೂಚಿಸಿತು. ಆಫ್‌ಘಾನಿಸ್ತಾನದ ಕಾರ್ಮಲ್ ಸರ್ಕಾರ ಅಲ್ಲಿನ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಸೂಚಿಸಿರುವುದನ್ನು ಕೇಂದ್ರಸಮಿತಿ ಸ್ವಾಗತಿಸಿತು.

ಭಾರತ-ಚೀನ ಸಂಬಂಧಗಳ ಸುಧಾರಣೆ ಮತ್ತು ಗಡಿ ವಿವಾದದ ಇತ್ಯರ್ಥದ ಬಗ್ಗೆ ಚೀನದ ಉಪಪ್ರಧಾನಿ ಡೆಂಗ್‌ಕ್ಸಿಯೋಪಿಂಗ್ ಅವರು ಇತ್ತಿರುವ ಸಲಹೆಗಳು ಮತ್ತು ಭಾರತ ಸರ್ಕಾರ ಅದಕ್ಕೆ ಸೂಚಿಸಿರುವ ಒಳ್ಳೆಯ ಪ್ರತಿಕ್ರಿಯೆ ಇವೆರಡನ್ನೂ ಕೇಂದ್ರಸಮಿತಿ ಸ್ವಾಗತಿಸುತ್ತದೆ. ಎರಡು ದೇಶಗಳ ನಡುವೆ ಸಂಬಂಧಗಳು ಸರಿಹೊಂದುವುವೆಂದು ಅದು ಆಶಿಸುತ್ತದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಸ್ಸಾಂ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಅಚಿಂತ್ಯ ಭಟ್ಟಾಚಾರ್ಯ ಮತ್ತು ತ್ರಿಪುರಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಕಾಂ, ಪಿ. ರಾಮಮೂರ್ತಿ ಇವರ ವರದಿಗಳನ್ನು ಆಧರಿಸಿದ ಚರ್ಚೆಗಾಗಿ ಸಭೆಯ ಮೊದಲದಿನ ವಿೀಸಲಾಗಿತ್ತು.

ಅಸ್ಸಾಂ ಚಳುವಳಿ ಪ್ರತ್ಯೇಕತಾವಾದಿ; ದೇಶವನ್ನು ಛಿದ್ರಗೊಳಿಸುವಂಥದು. ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ಭಾರತೀಯ ಪೌರ ಹಕ್ಕುಗಳ ವಿರುದ್ಧ ಉದ್ದೇಶಿಸಲಾಗಿರುವ ಹಿಂಸಾತ್ಮಕ ಚಳುವಳಿ ಇದು. ಆರೆಸ್ಸೆಸ್ ಇದಕ್ಕೆ ಕುಮ್ಮಕ್ಕು ಕೊಡುತ್ತಿದೆ. ಸಾಮ್ರಾಜ್ಯಶಾಹಿಗಳು ಅದರಲ್ಲೂ ಅಮೆರಿಕನ್ನರು ಈ ಚಳುವಳಿಗೆ ಬೆಂಬಲ ನೀಡುತ್ತಿದ್ದಾರೆ. ಅಮೆರಿಕ ರಾಜತಾಂತ್ರಿಕರ ಅನಗತ್ಯ ಅಸ್ಸಾಂ ಭೇಟಿಗಳು, ಕ್ರೈಸ್ತ ಮಿಷನರಿಗಳ ರಾಷ್ಟ್ರವಿರೋಧಿ ಚಟುವಟಿಕೆಗಳು ಇವೆಲ್ಲವೂ ಅವರ ದುರುದ್ದೇಶವನ್ನು ಸೂಚಿಸುತ್ತವೆ ಎಂದು ಕೇಂದ್ರಸಮಿತಿ ಅಭಿಪ್ರಾಯಪಡುತ್ತದೆ.

ಪ್ರತ್ಯೇಕತಾವಾದಿಗಳನ್ನು ಸೋಲಿಸಿ, ಅಲ್ಪಸಂಖ್ಯಾತರನ್ನು ರಕ್ಷಿಸುವ ದೇಶದಾದ್ಯಂತ ಹೋರಾಟ ನಡೆಯಬೇಕಾಗಿದೆ. ದೇಶದ ಐಕ್ಯತೆಯನ್ನು ಕಾಪಾಡಲು ಯತ್ನಿಸುತ್ತಿರುವ ವಾಮಪಕ್ಷಗಳು ಮತ್ತು ಹಿರೇನ್ ಗೋಹೇನ್‌ರಂಥ ವ್ಯಕ್ತಿಗಳನ್ನು ಕೇಂದ್ರಸಮಿತಿ ಅಭಿನಂದಿಸುತ್ತದೆ.

ತ್ರಿಪುರದ ಬೆಳವಣಿಗೆಗಳು :

ತ್ರಿಪುರದ ಬೆಳವಣಿಗೆಗಳ ಬಗ್ಗೆ ಕೇಂದ್ರಸಮಿತಿ ತೀವ್ರ ಕಾಳಜಿಯನ್ನು ವ್ಯಕ್ತಪಡಿಸಿತು. ಮಾರ್ಕ್ಸ್‌ವಾದಿ ಪಕ್ಷದ ಬಲ, ವಾಮರಂಗ ಸರ್ಕಾರದ ಅಸ್ತಿತ್ವ ಮತ್ತು ಅವರ ಜನಪರ ನೀತಿಗಳು ಇವುಗಳಿಂದಾಗಿ ತ್ರಿಪುರದಲ್ಲಿ ಈಶಾನ್ಯದ ಇತರ ಪ್ರದೇಶಗಳ ಸಮಸ್ಯೆ ಎದ್ದಿಲ್ಲ.

ಆದರೆ ತ್ರಿಪುರ ಉಪಜಾತಿ ಯುವ ಸಮಿತಿಯವರು ತಮ್ಮ ಪ್ರಭಾವ ಇಳಿಮುಖವಾಗುತ್ತಿರುವುದರಿಂದ ಕುಪಿತರಾಗಿ ರಾಜ್ಯದ ಶಾಂತಿಯನ್ನು ಕದಡಿ ವಾಮರಂಗ ಸರ್ಕಾರದ ಬಗ್ಗೆ ಅಸಮಾಧಾನ ಮೂಡಿಸಲು ಯತ್ನಿಸುತ್ತಿದ್ದಾರೆ. ಅಸ್ಸಾಂ ಚಳುವಳಿಯಿಂದ ಉತ್ತೇಜಿತರಾಗಿ ಇವರೂ 1949ರ ನಂತರ ತ್ರಿಪುರಕ್ಕೆ ಬಂದವರ ಉಚ್ಚಾಟನೆಯನ್ನು ಒತ್ತಾಯಿಸುತ್ತಿದ್ದಾರೆ. ಅಮರಬಂಗಾಲಿ ಮತ್ತು ಆನಂದ ಮಾರ್ಗಿಗಳು ಬಂಗಾಳಿಗಳ ಮನಸ್ಸು ಕೆಡಿಸಿ, ವಾಮರಂಗ ಸರ್ಕಾರ ಬುಡಕಟ್ಟಿನವರ ಹಿತಾಸಕ್ತಿಗಳನ್ನು ಮಾತ್ರ ಕಾಪಾಡುತ್ತದೆಂದು ಪ್ರಚಾರವಡಾದು

(ಕಡೆಯ ಪುಟ ನೋಡಿ)

ಸಂಸತ್ತಿನಲ್ಲಿ ಸುಶೀಲಗೋಪಾಲನ್ ಒತ್ತಾಯ

ಜನಸೇವೆಗೆ ಜನತೆಗೇ ಅಧಿಕಾರ ಕೊಡಿ

[ಒಂದು ಕಡೆ ಕೇಂದ್ರ ಸರ್ಕಾರದ ಕೈಯ್ಯಲ್ಲಿ ವಿಪರೀತ ಅಧಿಕಾರ. ಮತ್ತೆ ದೇಶದ ಹಲವೆಡೆ ಪ್ರತ್ಯೇಕತಾವಾದಿ ಕುರುಹು ಕಂಡಿರುವ ಹೋರಾಟಗಳು. ಇವೆಲ್ಲ ಏಕೆ? ಸಂಸತ್ ಸದಸ್ಯೆ ಕಾಂ. ಸುಶೀಲಗೋಪಾಲನ್ ಅವರು ಸಂಸತ್ತಿನಲ್ಲಿ ಮಾಡಿದ ಭಾಷಣ ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಡುತ್ತದೆ. ನಮ್ಮ ಓದುಗರಿಗಾಗಿ ಕಾಂ. ಸುಶೀಲಗೋಪಾಲನ್‌ರ ಭಾಷಣವನ್ನು ಇಲ್ಲಿ ಕೊಡಲಾಗಿದೆ]

ಮಾನ್ಯ ಅಧ್ಯಕ್ಷರೆ,

ಕೇಂದ್ರ-ರಾಜ್ಯಗಳ ಸಂಬಂಧಗಳ ಬಗ್ಗೆ ವಿವರವಾದ ಚರ್ಚೆ ನಡೆಯಬೇಕೆಂದು ಕಳೆದ ಅಧಿವೇಶನದಲ್ಲಿ ನಾನು ಮಂಡಿಸಿದ ಖಾಸಗಿ ಮಸೂದೆಗೆ ಈ ಮನೆಯ (ಸಂಸತ್ತಿನ) ಹಲವು ಸದಸ್ಯರು ತಮ್ಮ ಒಕ್ಕೊರಲಿನ ಬೆಂಬಲ ಸೂಚಿಸಿದ್ದಾರೆಂದು ತಿಳಿದು ನನಗೆ ಸಂತೋಷವಾಗಿದೆ. ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯೊಂದು ಈ ವಿಷಯವಾಗಿ ತುರ್ತಾಗಿ ಜರುಗಬೇಕೆಂದೂ ಅವರು ಸಲಹೆ ಮಾಡಿದ್ದಾರೆ.

ನಮ್ಮ ಸಂವಿಧಾನವು ತತ್ವಶಃ ಒಕ್ಕೂಟಗಳ ಸ್ವರೂಪದ್ದಾದರೂ ಸ್ವಭಾವದಲ್ಲಿ ಮಾತ್ರ ಕೇಂದ್ರೀಯವಾಗಿದೆ ಎಂಬ ವಾಸ್ತವ ಸಂಗತಿ ನನಗೆ ಗೊತ್ತು. ಈ ವಿಷಯವನ್ನು ಸಂವಿಧಾನ ಕರ್ತೃ ಡಾ.ಅಂಬೇಡ್ಕರ್ ಅವರೇ ಹೇಳಿದ್ದಾರೆ ಮತ್ತು ಇದು ಎಲ್ಲರೂ ಒಪ್ಪಿರುವ ವಾಸ್ತವ ಸ್ಥಿತಿ. ನಮ್ಮ ಸಂವಿಧಾನವು ಒಕ್ಕೂಟ ಸ್ವರೂಪದ್ದೋ ಅಥವ ಕೇಂದ್ರೀಯ ಸ್ವರೂಪದ್ದೋ ಎಂಬುದು ಕೇಂದ್ರ ಸರ್ಕಾರದ ಸಹೃದಯದ ಮೇಲೆ ನಿಂತಿದೆ, ಕೇಂದ್ರದವರು ಯಾವಾಗ ಅದನ್ನು (ಸಂವಿಧಾನ) ಒಕ್ಕೂಟಸ್ವರೂಪದ್ದು ಎಂದುಪರಿಶೀಲಿಸುತ್ತಾರೆ ಆಗ ಅದು ಒಕ್ಕೂಟ; ಇಲ್ಲದಿದ್ದರೆ; ಕೇಂದ್ರದವರು ಇಚ್ಛಿಪಟ್ಟರೆ ಅದು (ಸಂವಿಧಾನ) ಕೇಂದ್ರೀಯ ಸ್ವರೂಪದ್ದೇ ಆಗಿರುತ್ತದೆ. ಅಂತೂ ಸಂವಿಧಾನದ ಸ್ವರೂಪವು ಕೇಂದ್ರ ಸರ್ಕಾರದ ಸಹೃದಯತೆಯನ್ನೇ ಅವಲಂಬಿಸಿದೆ.

ಬಲಿಷ್ಠ ಕೇಂದ್ರ ಸರ್ಕಾರ ಕುರಿತು ಸಂಸತ್ತಿನ ಅನೇಕ ಸದಸ್ಯರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕೆಲವೊಂದು ತಪ್ಪು ಕಲ್ಪನೆಗಳು ಇವೆ ಎಂದು ನನ್ನ ಭಾವನೆ. ರಾಷ್ಟ್ರದ ಈಶಾನ್ಯ ಗಡಿ ರಾಜ್ಯಗಳಲ್ಲಿ (ಅಸ್ಸಾಂ, ನಾಗಾಲ್ಯಾಂಡ್) ನಡೆಯುತ್ತಿರುವ ಇತ್ತೀಚಿನ ಘಟನೆಗಳನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು. ಇಡೀ ದೇಶದಲ್ಲೇ ಸಂಭವಿಸುತ್ತಿರುವ ಘಟನೆಗಳು ಏನನ್ನು ಹೇಳುತ್ತವೆ? ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧದ ಬಗ್ಗೆ ಕೂಲಂಕುಶ ಚರ್ಚೆಯಾಗಬೇಕೆಂದು ಆ ಘಟನೆಗಳು ನಿಜಕ್ಕೂ ಎಚ್ಚರಿಕೆ ಕೊಡುತ್ತಿವೆ. ದೇಶದ ಗಡಿ ಭಾಗಗಳ ರಾಜ್ಯಗಳಲ್ಲಿ ಅಂತಹ ಘಟನೆಗಳು ಏಕೆ ಸಂಭವಿಸುತ್ತಿವೆ? "ಮಣ್ಣಿನ ಮಕ್ಕಳವಾದ" ಕುರಿತೂ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು. ಈ ಪ್ರಶ್ನೆ ಕೂಡ ಈಗ ಎದ್ದು ನಿಂತಿದೆ. ರಾಷ್ಟ್ರದ ಜೀವನವನ್ನೇ ಕಲಕುವಂತಹ ಇಂತಹ ಪ್ರವೃತ್ತಿಗಳು ಬೆಳೆದುಬರುತ್ತಿವೆ. ಏಕೆ? ಈ ಎಲ್ಲ ಸಮಸ್ಯೆಗಳ ಬಗ್ಗೆ ವಿವರವಾದ ಮತ್ತು ಆಳವಾದ ಅಧ್ಯಯನವನ್ನು ನೀವು ಮಾಡಬೇಕಾಗಿದೆ.

ಅಸಡ್ಡೆ, ಅನಾದರ ಮತ್ತು ಅಲಕ್ಷ್ಯಕ್ಕೆ ತಾವು ಒಳಗಾಗಿದ್ದೇವೆ ಎಂದು ಎಲ್ಲಾ ರಾಜ್ಯಗಳ ಜನತೆ ಅಂದುಕೊಳ್ಳತೊಡಗಿದ್ದಾರೆ. ಜನತೆಯ ಈ ಭಾವನೆ ಉತ್ತರದ ರಾಜ್ಯಗಳಲ್ಲಿ ಮಾತ್ರ ಇಲ್ಲ. ಅದು ಕೇರಳವೂ ಸೇರಿದಂತೆ ಅನೇಕ ರಾಜ್ಯಗಳ ಜನತೆಯೂ ಹಾಗೆಂದುಕೊಳ್ಳುತ್ತಿದ್ದಾರೆ. ಉತ್ತರ ಪ್ರದೇಶ ಮತ್ತು ಬಿಹಾರದ ಕಥೆ ಏನು? ಅವರಿಗೂ ಅದೇ ಚಿಂತೆ ಶುರುವಾಗಿದೆ. ಬಿಹಾರ ರಾಜ್ಯವು ಸಾಕಷ್ಟು ಅಬ್ಕಾರಿ ಶುಲ್ಕವನ್ನು ಪಾವತಿ ಮಾಡುತ್ತಿದೆ. ಆದರೆ ಆ ರಾಜ್ಯದ ಸ್ಥಿತಿ ಏನಾಗಿದೆ ಗೊತ್ತೆ? ಆ ರಾಜ್ಯದ ಜನರು ಅತ್ಯಂತ ದರಿದ್ರರಾಗಿದ್ದಾರೆ-ಹಿಂದುಳಿದಿದ್ದಾರೆ. ಇದರರ್ಥ ಏನು? ದಿಲ್ಲಿಯಲ್ಲಿ ಕುಳಿತುಕೊಂಡು ಜನತೆಯ ಕಲ್ಯಾಣವನ್ನು, ದೇಶದ ಪ್ರಗತಿಯನ್ನು ಕೇಂದ್ರದವರು ನೀವು ಮಾಡಲು ಸಾಧ್ಯವಿಲ್ಲ ಎಂದು ಇದರ ಅರ್ಥ. ವಿಕೇಂದ್ರೀಕರಣ ಮಾಡಿ, ರಾಜ್ಯಗಳ ಅಭಿವೃದ್ಧಿಯನ್ನು ರಾಜ್ಯಗಳಿಗೆ ವಹಿಸಬೇಕಾಗುತ್ತದೆ ನೀವು.

47ರಲ್ಲಿ ರಾಷ್ಟ್ರವು ವಿಭಜನೆಯಾದ ನಂತರ ಬಲಿಷ್ಠ ಕೇಂದ್ರ ಸರ್ಕಾರವೊಂದು ಇರಬೇಕೆಂದು ರಾಜ್ಯಾಂಗ ರಚನಾ ಸಭೆಯು ಯೋಚಿಸಿತೆಂದೂ ಮತ್ತು ಈ ಚಿಂತನೆಯಿಂದಾಗಿ ರಾಷ್ಟ್ರವನ್ನು ದುರ್ಬಲಗೊಳಿಸುವುದರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೇಂದ್ರದ ಕೈಯ್ಯಲ್ಲಿ ಸಾಕಷ್ಟು ಅಧಿಕಾರವಿದೆ ಮತ್ತು ಇದು ಅಗತ್ಯಕೂಡ ಎಂಬುದಾಗಿ ಮಾನ್ಯ ಮಹಂತ್ರೆ (ಕಾಂಗ್ರೆ) ಅವರು ಮಾತನಾಡುವಾಗ ತಿಳಿಸಿದರು. ಅಸ್ಸಾಂ ಮತ್ತು ಗಡಿ ಪ್ರದೇಶದ ಇತರೇ ರಾಜ್ಯಗಳಲ್ಲಿ ಜರುಗುತ್ತಿರುವ ಘಟನೆಗಳ ನಂತರವೂ ಮಾನ್ಯ ಮಹಂತ್ರೆ ಅವರು ಅದೇ ಅಭಿಪ್ರಾಯವನ್ನು ಹೊಂದಿದ್ದಾರೆಯೇ ಎಂದು ಕೇಳಲು ನಾನು ಇಚ್ಛಿಸುತ್ತೇನೆ.

ಕೇಂದ್ರದ ಬಳಿ ಹೆಚ್ಚು ಹೆಚ್ಚು ಅಧಿಕಾರ ಶೇಖರವಾಗುತ್ತಿರುವುದು ಕಳೆದ 33 ವರ್ಷಗಳಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಆದರೆ ಅದರ ಪ್ರತಿಫಲ ಏನಾಗಿದೆ ಗೊತ್ತಾ? ದೇಶದ ಐಕ್ಯತೆಯನ್ನು ಕಾಪಾಡಲು ನೀವು ಶಕ್ತರಾಗಿದ್ದೀರೇನು? ದೇಶವನ್ನು ಕಲಕುವ ಎಲ್ಲಾ ರೀತಿಯ ಪ್ರವೃತ್ತಿಗಳು ಉದ್ಭವವಾಗತೊಡಗಿವೆ. ಪ್ರತ್ಯೇಕತೆಯ ಧ್ವನಿಕೂಡ ರಾಷ್ಟ್ರದ ಈಶಾನ್ಯ ಭಾಗದಿಂದ ಕೇಳಿ ಬರತೊಡಗಿದೆ. ದೇಶವನ್ನು ಆಳುತ್ತಿರುವ ಅಧಿಕಾರರೂಢ ಪಕ್ಷವು ಈ ಬೆಳವಣಿಗೆಯಿಂದ ಕೆಲವೊಂದು ಪಾಠಗಳನ್ನಾದರೂ ಕಲಿಯುವುದೇ? ಕೇಂದ್ರದಲ್ಲಿ ಅತ್ಯಂತ ಕನಿಷ್ಟ ಇಲಾಖಾಧಿಕಾರ ಮತ್ತು ರಾಜ್ಯಗಳಿಗೆ ಅತ್ಯಂತ ಹೆಚ್ಚಿನ ಇಲಾಖಾಧಿಕಾರ ಇರಬೇಕೆಂಬ ಕಾಂಗ್ರೆಸ್ ಪಕ್ಷದ ಮೂಲ ಕಲ್ಪನೆಯ ವಿರುದ್ಧವೇ ನೀವು ಹೋಗುತ್ತಿದ್ದೀರಿ. ಮಹಾತ್ಮಗಾಂಧೀಜೀಯವರ ಅಭಿಪ್ರಾಯವನ್ನು, ದೃಷ್ಟಿಕೋನವನ್ನು ನೀವು ಎತ್ತಿ ಹಿಡಿಯುತ್ತೀರ ಎಂದು ನಾನು ಅಧಿಕಾರರೂಢ ಆಡಳಿತ ಪಕ್ಷವನ್ನು ಕೇಳ ಬಯಸುತ್ತೇನೆ.

ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಎಂದರೇನು ಎಂಬುದು ನಿಮಗೆ ಗೊತ್ತಾ? ಅಧಿಕಾರವು ವಿಕೇಂದ್ರೀಕರಣಗೊಳ್ಳಬೇಕೆಂಬುದೇ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಲ್ಲಿ ಅಡಕವಾಗಿರುವ ಸಂದೇಶ.

ಎಲ್ಲಾ ರಾಜ್ಯಗಳ ಮೇಲೆ ಕಳೆದ ಅನೇಕ ವರ್ಷಗಳಿಂದಲೂ ನೀವು ನಿಯಂತ್ರಣವನ್ನು ಹೊಂದಿದ್ದೀರಿ. ಆಗಿದ್ದಾದರೂ ಏನು? ದುರ್ಬಲ ವರ್ಗಗಳನ್ನು ಕಾಪಾಡಲು ನಿಮ್ಮಿಂದ ಸಾಧ್ಯವಾಯಿತೆ? ದುರ್ಬಲ ವರ್ಗಗಳ ವಿರುದ್ಧ ಹಗಲು ರಾತ್ರಿ ಹಲ್ಲೆಗಳಾಗುತ್ತಿವೆ. ಹೀಗೇಕೆ ಆಗುತ್ತಿದೆ? ನನಗೆ ನೀವು ನಿಗದಿ ಮಾಡಿರುವ ಅಲ್ಪ ಸಮಯದಲ್ಲಿ ಅವೆಲ್ಲವುಗಳ ಬಗ್ಗೆ ವಿವರವಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ದುರ್ಬಲ ವರ್ಗಗಳ ರಕ್ಷಣೆ ಮಾಡಲು ನೀವು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ.

ಬೇಸಾಯ ಕೂಲಿಗಾರರು, ರೈತರು ಮತ್ತು ದುರ್ಬಲ ವರ್ಗಗಳವರ ರಕ್ಷಣೆಗಾಗಿ ಕೇರಳ ರಾಜ್ಯಸರ್ಕಾರವು ಮಾಡಿರುವ ಭೂಶಾಸನಗಳನ್ನು ಮತ್ತು ಆ ರಾಜ್ಯದ ರಾಜ್ಯ ಸರ್ಕಾರವು ಶಾಸನದ ಜಾರಿಗೆ ತೆಗೆದುಕೊಂಡಿರುವ ಕ್ರಮಗಳನ್ನು ನಾನಿಲ್ಲಿ ಉದಾಹರಿಸಬಲ್ಲೆ. ಆದ್ದರಿಂದಾಗೇ ಆ ರಾಜ್ಯದಲ್ಲಿ ಬೇಸಾಯ ಕೂಲಿಗಾರರ, ರೈತರ ಮತ್ತು ದುರ್ಬಲ ವರ್ಗಗಳ ಮೇಲೆ ಹಲ್ಲೆಗಳು ನಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೀವು ಕಲಿಯಬೇಕಾದಿರುವ ಪಾಠ; ಕೇರಳ ರಾಜ್ಯ ಸರ್ಕಾರದಿಂದ. ಕೇಂದ್ರಸರ್ಕಾರವು ಹೆಚ್ಚಿನ ಅಧಿಕಾರಗಳನ್ನು ತನ್ನ ಕೈಗೆ ತೆಗೆದುಕೊಳ್ಳುವುದರಿಂದ ಯಾವ ಸಮಸ್ಯೆಯ ಪರಿಹಾರವೂ ಸಾಧ್ಯವಿಲ್ಲ. ರಾಜ್ಯಗಳಿಗೆ ನೀವು ಹೆಚ್ಚಿನ ಅಧಿಕಾರಗಳನ್ನು ಕೊಡಲೇಬೇಕು. ಯಾಕೆಂದರೆ ನಮ್ಮ ನಾಡು ಹಲವು ಭಾಷೆ, ಸಂಸ್ಕೃತಿ ಮತ್ತು ಜನಾಂಗಗಳಿಂದ ಕೂಡಿದ ನಾಡು. ಇಂತಹ ನಾಡಿನಲ್ಲಿ ಕೇಂದ್ರದಿಂದ ಕುಳಿತು ಎಲ್ಲವನ್ನೂ ನಿರ್ದೇಶಿಸುವುದು ಸಾಧ್ಯವೇ ಇಲ್ಲ. ಎಲ್ಲ ಅಧಿಕಾರಗಳನ್ನು ಹಿಡಿದು ಕೇಂದ್ರದಿಂದ 33 ವರ್ಷಗಳ ದೀರ್ಘ ಕಾಲ ದರ್ಬಾರು ಮಾಡಿದ್ದೀರಿ ನೀವು. ನಿಮ್ಮ ದರ್ಬಾರಿನ ಫಲಿತಾಂಶವನ್ನೂ ನೀವೇ ನೋಡುತ್ತಿದ್ದೀರಿ. ತಾವು ನಿರಂತರ ಅಲಕ್ಷ್ಯ, ಅಸಡ್ಡೆ ಮತ್ತು ಅನಾದರಗಳಿಗೆ ಒಳಗಾಗಿದ್ದೇವೆಂಬ ಭಾವನೆ ದೇಶದ ಉದ್ದಗಲಕ್ಕೆ ಜನಸಮುದಾಯದಲ್ಲಿ ಬೆಳೆಯತೊಡಗಿದೆ.

ಆದ್ದರಿಂದ ರಾಜ್ಯಗಳಿಗೆ ಹೆಚ್ಚು ಹಣಕಾಸಿನ ಅಧಿಕಾರಗಳನ್ನು, ಆಡಳಿತದ ಅಧಿಕಾರಗಳನ್ನು ನೀವು ಕೊಡಲೇಬೇಕಾಗಿದೆ. ಇಷ್ಟೆಲ್ಲ ಸಮಸ್ಯೆಗಳು ಇದ್ದಾಗ್ಯೂ ಕೂಡ ಕೇಂದ್ರವು ರಾಜ್ಯಗಳ ಸರ್ಕಾರಗಳೊಂದಿಗೆ ಕುಳಿತು ಚರ್ಚಿಸಲು ಸಿದ್ಧವಾಗಿಲ್ಲ. ಜನತೆಯ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂಬ ಬಗ್ಗೆ ಮಾತುಕತೆ ನಡೆಸಲೂ ಕೇಂದ್ರಸರ್ಕಾರ ಸಿದ್ಧವಾಗಿಲ್ಲ.

ಕೇರಳ ರಾಜ್ಯದ ಕೋಕೊ ಬೆಳೆಗಾರರ ಸಮಸ್ಯೆಯನ್ನೇ ನಾನು ಉದಾಹರಿಸಬಯಸುತ್ತೇನೆ. ತಾವು ಬೆಳೆದ ಕೋಕೊ ಬೆಳೆಗೆ ಮಾರುಕಟ್ಟೆ ಇಲ್ಲದಿರುವುದು ಆ ರೈತರ ಗಂಭೀರ ಸಮಸ್ಯೆಯಾಗಿದೆ. ಕೋಕೊ ಉತ್ಪನ್ನವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಡಿ. ದೇಶದ ಅಮೂಲ್ಯ ವಿದೇಶಿ ವಿನಿಮಯವನ್ನು ಹಾಳು ಮಾಡಬೇಡಿ, ಆಮದು ಶುಲ್ಕವನ್ನು ಕಟ್ಟಬೇಡಿ ಎಂಬುದಾಗಿ ಆ ರೈತರು ಅವರ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ ಆದರೆ ನೀವು ಮಾಡಿರುವುದೇನು? ಕೋಕೋ ಉತ್ಪನ್ನವನ್ನು ಆಮದು ಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ನೀವು ತೆಗೆದುಕೊಂಡಿದ್ದೀರಿ. ಯಾರನ್ನು ಉಳಿಸಲು ಈ ನಿಮ್ಮ ನಿರ್ಧಾರ? ದೇಶದ ಅತ್ಯಂತ ಶ್ರೀಮಂತರ ಮನೆಯಾದ ಕ್ಯಾಡ್‌ಬರಿ ಕಂಪೆನಿಯ ಮನೆಯವರ ಲಾಭಕ್ಕಾಗಿ ಈ ನಿಮ್ಮ ನಿರ್ಧಾರ. ಈ ನಿಮ್ಮ ಧೋರಣೆಯಿಂದಾಗಿ ಕೇರಳದ ಸಾವಿರಾರು ರೈತರು ನಿಮ್ಮ ಮೇಲೆ ಕೋಪಗೊಂಡಿದ್ದಾರೆ. ಕೇರಳ ಸರ್ಕಾರದ ಜೊತೆ ಕುಳಿತು ಆ ಬಡ ರೈತರ ಸಮಸ್ಯೆ ಚರ್ಚಿಸಲು ನಿಮಗೆ ಸಾಧ್ಯವಿಲ್ಲವೆ? ರಬ್ಬರ್ ಬೆಳೆಗೂ ಮತ್ತು ಅದನ್ನು ಬೆಳೆದ ರೈತರಿಗೂ ಇದೇ ದುರ್ಗತಿಯನ್ನು ನೀವು ಕಾಣಿಸಿದ್ದೀರಿ. ರೈತರ ವಿರುದ್ಧ ನೀವು ಇದೇ ರೀತಿಯಾಗಿ ನಡೆದುಕೊಂಡು ಸಾಗಿದರೆ ಎಲ್ಲ ರಾಜ್ಯಗಳ ರೈತರು ನಿಮ್ಮ ಮೇಲೆ ಏನು ಭಾವನೆ ತಳೆಯುತ್ತಾರೆ?

1981ರ ಯೋಜನಾ ಕಾರ್ಯಕ್ರಮ ಕುರಿತೂ ನೀವು ರಾಜ್ಯ ಸರ್ಕಾರಗಳ ಜೊತೆ ಮಾತನಾಡಲು ತಯಾರಿಲ್ಲ. ರಾಷ್ಟ್ರದ ಅಭಿವೃದ್ಧಿ ಮಂಡಳಿಗಳಿಗೆ ಚರ್ಚೆಯಲ್ಲಿ ಭಾಗವಹಿಸಲು ನೀವು ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಆಹ್ವಾನಿಸುತ್ತಿಲ್ಲ. ಯಾಕೆಂದರೆ ಅದೆಲ್ಲಾ ನಿಮ್ಮ ಸಹೃದಯತೆಯನ್ನು ಅವಲಂಬಿಸಿದೆ. ರಾಷ್ಟ್ರದ ಅಭಿವೃದ್ಧಿ ಮಂಡಳಿ ಇದೆ, ರಾಷ್ಟ್ರದ ಭಾವೈಕ್ಯ ಮಂಡಳಿ ಇದೆ ಎಂದೆಲ್ಲಾ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದರು. ಆದರೆ ಈ ಮಂಡಳಿಗಳು ಸಭೆ ಸೇರುತ್ತವೆಯೆ? 1980–81ರ ಯೋಜನಾ ಕಾರ್ಯಕ್ರಮ ಚರ್ಚೆಯಾಗಬೇಕೆಂದು ನನ್ನ ಪಕ್ಷ ಒತ್ತಾಯಿಸಿದರೂ, ಕೇರಳದ ಮುಖ್ಯಮಂತ್ರಿಗಳು ಕೇಂದ್ರದ ವಿರುದ್ಧ ಪ್ರತಿಭಟಿಸಿದರೂ ನೀವಿನ್ನೂ ಅವರನ್ನು ಆಹ್ವಾನಿಸಿಲ್ಲ. ಆರನೇ ಪಂಚವಾರ್ಷಿಕ ಯೋಜನೆಯ ಚರ್ಚೆ ನಡೆಯುವಾಗ ಆಹ್ವಾನಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿ ಸುಮ್ಮನಾದರು. ಆದರೆ 80–81ರ ಆರ್ಥಿಕ ವರ್ಷವು ಆರನೇ ಪಂಚವಾರ್ಷಿಕ ಯೋಜನೆಯ ಒಂದು ಭಾಗ ಎಂಬುದು ನಿಮಗೆ ಮರೆತುಹೋಯಿತು. ಆದ್ದರಿಂದ ರಾಜ್ಯಗಳೊಂದಿಗೆ ಸಂಧಾನ-ಮಾತುಕತೆಯು ಅತ್ಯಂತ ಅಗತ್ಯವಾಗಿದೆ ಎಂದು ಹೇಳಬಯಸುತ್ತೇನೆ.

ರಾಜ್ಯಗಳ ಸರ್ಕಾರಗಳೊಂದಿಗೆ ಕೇಂದ್ರ ಸರ್ಕಾರವು ಕುಳಿತು ಮಾತನಾಡಬೇಕು-ಸಮಸ್ಯೆಗಳ ಚರ್ಚೆಯಾಗಬೇಕು ಎಂಬಂತಹ ರಾಜ್ಯಾಂಗ ವ್ಯವಸ್ಥೆ ಇರಬೇಕು. ಇಂತಹ ವ್ಯವಸ್ಥೆ ಈಗ ಇಲ್ಲ. ಆದ್ದರಿಂದಲೇ ಕೇಂದ್ರ ಮತ್ತು ರಾಜ್ಯಗಳ ಅಧಿಕಾರಗಳ ಮರು ವ್ಯವಸ್ಥೆಯಾಗಬೇಕು ಎಂದು ನಾವು ಕೇಳುತ್ತಿದ್ದೇವೆ. ಇಂತಹದೊಂದು ಮರು ವ್ಯವಸ್ಥೆ ಆಗದಿದ್ದರೆ ಈ ದೇಶದಲ್ಲಿ ಇನ್ನೂ ಅತ್ಯಂತವಾದ ಕೆಟ್ಟ ಘಟನೆಗಳು ಜರುಗುತ್ತವೆ ಎಂಬುದಾಗಿ ನಾನು ಕೇಂದ್ರ ಸರ್ಕಾರವನ್ನು ಎಚ್ಚರಿಸಬಯಸುತ್ತೇನೆ, ಕಾಂಗ್ರೆಸ್ (ಐ) ಪಕ್ಷದವರು ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಗಳೇ ಕೇಂದ್ರ ಸರ್ಕಾರದ ವಿರುದ್ಧ ತಿರುಗಿ ಬೀಳುತ್ತವೆ. ಈ ದಿನ ಬಹುದೂರವೇನಿಲ್ಲ. ಯಾಕೆಂದರೆ ಆ ರಾಜ್ಯಗಳಿಗೂ ಅಲ್ಲಿಯ ಜನತೆಗೂ ಕಷ್ಟಗಳಿವೆ.

(7ನೇ ಪುಟ ನೋಡಿ)

ಸಂಜಯಗಾಂಧಿ ದುರ್ಮರಣ

–ಕೆಲವು ಮೂಲಭೂತ ಪ್ರಶ್ನೆಗಳು–

—ರಾಂ

ಇಷ್ಟೊಂದು ಪ್ರಚಾರ, ಪ್ರಾಶಸ್ತ್ಯ ಅಗತ್ಯವೆ ? :

ಸಂಜಯಗಾಂಧಿ ತಾ. 23-6-80 ರಂದು ಮುಂಜಾನೆ ಮನೋರಂಜನೆಗಾಗಿ ವಿಮಾನ ಹಾರಿಸುತ್ತಿದ್ದಾಗ ಅಪಘಾತಕ್ಕೊಳಗಾಗಿ ದುರ್ಮರಣ ಹೊಂದಿರುವುದು ಸಾಮಾನ್ಯವಾಗಿ ಎಲ್ಲರಿಗೂ ದುಃಖದ ವಿಷಯವೇ ಸರಿ. ಆತ ಪ್ರಾಯದಲ್ಲಿ ಇನ್ನೂ 33 ದಾಟಿಲ್ಲ, ಪ್ರಧಾನಿ ಇಂದಿರಾಗಾಂಧಿಯ ಮಗ, ಇಂದಿರಾಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಪಾರ್ಲಿಮೆಂಟ್ ಸದಸ್ಯರಲ್ಲಿ ಒಬ್ಬ. ಎಲ್ಲರಿಗೂ ಸಂಜಯಗಾಂಧಿಯ ದುರ್ಮರಣದಿಂದ 'ಅಯ್ಯೋ' ಎನಿಸುವುದು ಸಹಜ. ರಾಜಕೀಯವಾಗಿ ಆತನ ಧ್ಯೇಯ ಧೋರಣೆಗಳಿಗೆ ಪ್ರಬಲ ವಿರೋಧ ಇದ್ದವರೂ ಆತನ ಅಕಾಲ ಮರಣಕ್ಕೆ ಮರುಗಿದ್ದಾರೆ. ಕಾರಣ, ಒಬ್ಬ ವ್ಯಕ್ತಿಯ ಮರಣದಲ್ಲಿ ಆತನು ಪ್ರತಿನಿಧಿಸುತ್ತಿದ್ದ ಮೌಲ್ಯಗಳು ಸಾಯುವುದಿಲ್ಲ ಎಂದು ಅವರಿಗೆ ಚೆನ್ನಾಗಿ ಗೊತ್ತು.

ಆದರೆ ಸಾರ್ವಜನಿಕರ ಮುಂದೆ ಕೆಲವು ಮೂಲಭೂತವಾದ ಪ್ರಶ್ನೆಗಳು ಎದ್ದಿವೆ. ಆತ ಮರಣ ಹೊಂದಿದ ಒಂದೇ ತಾಸಿನೊಳಗೆ ಭಾರತದ ವಿಮಾನ, ನೌಕೆ, ಮತ್ತು ಸೈನ್ಯದಳಗಳ ಮಹಾ ದಂಡನಾಯಕರಿಗೆ ಗಂಡಾಂತರ ಪರಿಸ್ಥಿತಿಯನ್ನು ಎದುರಿಸಲು ಸುಸಜ್ಜಿತವಾಗಿರಲು ಸರಕಾರದಿಂದ ಆದೇಶ ಹೋದದ್ದು ಸರಿಯೇ ? ಮುಂದೆ ಈ ದಂಡನಾಯಕರು ಸಂಜಯಗಾಂಧಿಯ ಸ್ಮಶಾನಯಾತ್ರೆಯಲ್ಲಿಯೂ ಶವಸಂಸ್ಕಾರ ಕಾರ್ಯದಲ್ಲಿಯೂ ಭಾಗವಹಿಸಿದ್ದು ಸರಿಯೇ ? ಆತನ ಮರಣದ ವಾರ್ತೆಯನ್ನು ಸತತವಾಗಿ ದಿನವಿಡೀ ಆಕಾಶವಾಣಿ, ಟಿ. ವಿ. ಯಲ್ಲಿ, ನಿಶ್ಚಿತ ಕಾರ್ಯಕ್ರಮಗಳನ್ನು ಬದಿಗೊತ್ತಿ, ಬಿತ್ತರಿಸಿದುದು ಸರಿಯೇ ? ಮರುದಿನ ಆತನ ಸ್ಮಶಾನಯಾತ್ರೆಯ ವಿವರಗಳನ್ನು ತಾಸುಗಟ್ಟಲೆ ರೇಡಿಯೋದಲ್ಲಿ ಎಲ್ಲಾ ಸ್ಟೇಶನ್‌ಗಳಲ್ಲಿ ಪ್ರಸಾರ ಮಾಡಿದ್ದು ಸರಿಯೇ ? ಸಂಜಯಗಾಂಧಿಯೊಂದಿಗೇ ದುರ್ಮರಣಕ್ಕೀಡಾದ ಕ್ಯಾ. ಸುಭಾಸ್ ಸಕ್ಸೇನಾ ಅವನ ಒಂದು ಚಿಕ್ಕ ಫೋಟೋ ಕೂಡಾ ಪತ್ರಿಕೆಯಲ್ಲಿ ಬಾರದೇ ಇರುವಾಗ, ಸಂಜಯಗಾಂಧಿಯ ಇಡೀ ಫೋಟೋವನ್ನು ಪತ್ರಿಕೆಗಳಲ್ಲಿ ಒಂದು ಪುಟವಿಡೀ ಪ್ರಕಟಿಸಿದ್ದು ಸರಿಯೇ ?

ಆತನ ಮರಣಕ್ಕಾಗಿ ಕರ್ನಾಟಕ ಸರಕಾರವೂ ಸೇರಿದಂತೆ ಕೆಲವು ರಾಜ್ಯಗಳು ರಜೆ ಸಾರಿದ್ದು ಸರಿಯೇ ? ಆತನ ಪಕ್ಷದವರು ಬಲಾತ್ಕಾರದಿಂದ ಅಂಗಡಿ ಆಫೀಸುಗಳನ್ನು ಮುಚ್ಚಿಸುವುದು, ಬಸ್ಸು ಲಾರಿಗಳನ್ನು ತಡೆದು ನಿಲ್ಲಿಸುವುದು, ಒತ್ತಾಯದಿಂದ ಬಂದ್ ಆಚರಿಸಲು ಪ್ರಚೋದಿಸುವುದು, ಇತ್ಯಾದಿಗಳಲ್ಲಿ ನಿರತರಾದದ್ದು ಸಂಜಯಗಾಂಧಿಗೆ ಶ್ರದ್ಧಾಂಜಲಿಯಾದೀತೇ ? ಕರ್ನಾಟಕ ಸರಕಾರವೂ ಸೇರಿದಂತೆ ಕೆಲವು ರಾಜ್ಯಗಳು ತಮ್ಮ ಕಾರು, ಜೀಪು, ಪೋಲೀಸ್, ಮತ್ತಿತರ ಅಧಿಕಾರಿಗಳನ್ನು ಸಂಜಯಗಾಂಧಿಯ ಚಿತಾಭಸ್ಮವನ್ನು ಬರಮಾಡಿಕೊಳ್ಳಲು ಬಳಸಿದ್ದು ಸರಿಯೇ ?.

ಸಂಜಯಗಾಂಧಿಯ ಭಕ್ತರು ಆತನನ್ನು ಈಗಲೇ ಏಸು, ಬುದ್ಧ, ಶಂಕರಾಚಾರ್ಯ, ವಿವೇಕಾನಂದ ಮುಂತಾದವರಿಗೆಲ್ಲಾ ಹೋಲಿಸಲಾರಂಭಿಸಿದ್ದಾರೆ. ಆತನ ಹಿಂಬಾಲಕರಾದ ಧೀರೇಂದ್ರ ಬ್ರಹ್ಮಚಾರಿ, ಆಚಾರ್ಯ ರಜನೀಶ, ಮುಂತಾದವರು ಅವನನ್ನು ಯೋಗಿ ಎಂದೂ ಋಷಿ ಎಂದೂ ಕೊಂಡಾಡತೊಡಗಿದ್ದಾರೆ! ಆತನ ಪಕ್ಷದವರು ಅವನಿಗೆ ಯೋಗ್ಯ ಸ್ಮಾರಕ ಕಟ್ಟಿಸಲು ತೀವ್ರ ಪೈಪೋಟಿಯಲ್ಲಿದ್ದಾರೆ!

ನಮ್ಮ ದೇಶದಲ್ಲಿ 1951ರಿಂದ ನೂರಾರು ಪಾರ್ಲಿಮೆಂಟ್ ಸದಸ್ಯರು ತಮ್ಮ ಅತ್ಯಮೂಲ್ಯವಾದ ಸೇವೆ ಸಲ್ಲಿಸಿ ಮೃತರಾಗಿದ್ದಾರೆ. ಮೊನ್ನೆ ಪಾರ್ಲಿಮೆಂಟ್ ಚುನಾವಣೆ ಆದ ಮೇಲೆ ಕೆಲವು ಸದಸ್ಯರು ಕಣ್ಣು ಮುಚ್ಚಿದರು. ಆದರೆ, ಒಬ್ಬ ಪಾರ್ಲಿಮೆಂಟ್ ಸದಸ್ಯ ತೀರಿ ಹೋದಾಗ ಹಿಂದೆಂದೂ ಇಷ್ಟೊಂದು ಪ್ರಚಾರ, ಪ್ರಾಶಸ್ತ್ಯ ನೀಡಿರಲಿಲ್ಲ, ಮುಂದೆಯೂ ನೀಡಲಿಕ್ಕಿಲ್ಲ. ದೇಶದಲ್ಲಿ ಹಲವಾರು ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳಿವೆ. ಅವುಗಳ ಮುಖ್ಯಸ್ಥರ ಮರಣಕ್ಕೂ ಇಷ್ಟೊಂದು ಪ್ರಚಾರ, ಪ್ರಾಶಸ್ತ್ಯ ದೊರೆಯಲಾರದು. ಹಾಗಾದರೆ, ಒಬ್ಬ ಪ್ರಧಾನಿ ಅಥವಾ ರಾಷ್ಟ್ರಾಧ್ಯಕ್ಷ ಮರಣಹೊಂದಿದಾಗಿನಷ್ಟು ಪ್ರಚಾರ, ಪ್ರಾಶಸ್ತ್ಯ ಸಂಜಯಗಾಂಧಿಗೇಕೆ ಕೊಡಲಾಯಿತು ? ಇದು ಸಂಜಯಗಾಂಧಿ-ಇಂದಿರಾ ಗಾಂಧಿ ಭಕ್ತರು ತಮ್ಮ ಅಧಿಕಾರ ಘಟ್ಟಿ ಮಾಡಿಕೊಳ್ಳಲು ನಡೆಸಿದ ನಗ್ನ ಪೈಪೋಟಿ. ಸಂಜಯಗಾಂಧಿಯ ಮರಣದ ದುರ್ಲಾಭ ಪಡೆದು, ಇಂದಿರಾಗಾಂಧಿಯ ಕೃಪಾಕಟಾಕ್ಷವನ್ನು ಗಳಿಸಲು ತಾನು ಮೇಲು ತಾನು ಮೇಲು ಎಂದು ಸಂಜಯಗಾಂಧಿಯ ಮೇಲಿನ ಗೌರವವನ್ನು ಮೆರೆಯಿಸಲು ನಡೆಸಿದ, ನಡೆಸುತ್ತಿರುವ ಪೈಪೋಟಿ. ಸೆಣಸಾಟ. ಯಾರ ವೆಚ್ಚದಿಂದ ? ಸಾರ್ವಜನಿಕರ ವೆಚ್ಚದಿಂದ. ಪ್ರಜಾಪ್ರಭುತ್ವದ ರೀತಿ ನೀತಿಗಳನ್ನು ಕಡೆಗಣಿಸಿ ಅಗತ್ಯಕ್ಕಿಂತ ಹೆಚ್ಚಾಗಿ ಒಬ್ಬ ವ್ಯಕ್ತಿಯನ್ನು ಪೂಜಿಸುವುದು ದಾಸ್ಯ ಪ್ರವೃತ್ತಿಯನ್ನು ಸ್ಪಷ್ಟಪಡಿಸುವುದು. ಇದು ಆರೋಗ್ಯವಲ್ಲ.

ಸಂಜಯಗಾಂಧಿಯ ಜೀವನ ಮೌಲ್ಯಗಳೇನು ?

ಸಂಜಯಗಾಂಧಿ ಯುವಶಕ್ತಿಯ ಆಶೋತ್ತರಗಳನ್ನು ಪ್ರತಿನಿಧಿಸುತ್ತಾನೆ ಎಂದು ಹೇಳಲಾಗುತ್ತಿದೆ. ಭಾರತದಂತಹ ಬಡದೇಶದ ಯುವಕರ ಆಶೋತ್ತರಗಳೇನು ? ಒಂದು ಶತಮಾನದಷ್ಟು ದೀರ್ಘ ಕಾಲದ ಸ್ವಾತಂತ್ರ್ಯ ಹೋರಾಟದ ನಂತರ ಗಳಿಸಿದ ರಾಜಕೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವವನ್ನು ರಕ್ಷಿಸುವುದು; ವಿದೇಶಿ ಬಂಡವಾಳಶಾಹಿಗಳಿಂದ ಮುಕ್ತರಾಗುವುದು; ದೇಶದಲ್ಲಿ ಬಂಡವಾಳಶಾಹಿ-ಭೂಮಾಲಕರ ಆಳ್ವಿಕೆಯನ್ನು ಕೊನೆಗೊಳಿಸಿ ಸಮಾಜವಾದಿ ಸಮಾಜ ಕಟ್ಟುವುದು, ಇವೇ ಮೊದಲಾದವುಗಳು ಭಾರತದ ಯುವಕರ ಆಶೋತ್ತರಗಳು. ಹಳೆಯ ವ್ಯವಸ್ಥೆಯನ್ನು ಬದಲಾಯಿಸಿ, ಹೊಸ ಮೌಲ್ಯಗಳನ್ನು ಜನಪ್ರಿಯಗೊಳಿಸುವುದೇ ಬಡಭಾರತ ದೇಶದ ಯುವಕರ ಮಹದಾಸೆ.

ಈ ದೃಷ್ಟಿಯಿಂದ ಸಂಜಯಗಾಂಧಿಯ ಜೀವನ ಮೌಲ್ಯಗಳೇನು ? ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಧ್ಯೇಯೋದ್ದೇಶಗಳ ಸಾಧನೆಗೆ ದೇಶದ ರೈತ-ಕಾರ್ಮಿಕರು, ವಿದ್ಯಾರ್ಥಿ-ಯುವಜನರು ನಿರ್ಣಾಯಕ ಹೋರಾಟ ನಡೆಸುತ್ತಿದ್ದಾಗಲೇ, ಸಂಜಯಗಾಂಧಿ ಚುನಾವಣೆ ನಡೆಸುವ ಬದಲು ತುರ್ತುಪರಿಸ್ಥಿತಿಯನ್ನು ಜಾರಿಗೊಳಿಸಿದ್ದು, ಬಲಾತ್ಕಾರದ ಸಂತಾನಹರಣ ಶಸ್ತ್ರಕ್ರಿಯೆ ನಡೆಸಿದ್ದು, ಬಲಾತ್ಕಾರದಲ್ಲಿ ಬಡವರ ಗುಡಿಸಲುಗಳನ್ನು ಕೆಡವಿ ನಗರ ನಿರ್ಮಲೀಕರಣ ಕೈಕೊಂಡದ್ದು, ಆರ್ಥಿಕ ಸಮಸ್ಯೆಗಳನ್ನು ಕಡೆಗಣಿಸಿ ಮರನೆಡುವುದು, ವಯಸ್ಕರಿಗೆ ಶಿಕ್ಷಣ ನೀಡುವುದೇ ಮುಂತಾದ ವಿಷಯಗಳಿಗೆ ಪ್ರಾಶಸ್ತ್ಯ ನೀಡಿದ್ದು; ಪತ್ರಿಕೆಗಳ ಮೇಲೆ, ರೇಡಿಯೋ ಮುಂತಾದ ಸಮೂಹ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಿದ್ದು, ನ್ಯಾಯಾಲಯಗಳ ಪಾತ್ರವನ್ನು ಕಡೆಗಣಿಸಿದ್ದು, ಪಾರ್ಲಿಮೆಂಟ್ ಪದ್ಧತಿಯ ಬದಲು ಅಧ್ಯಕ್ಷೀಯ-ಸರ್ವಾಧಿಕಾರಿ ಪದ್ಧತಿಯನ್ನು ಪ್ರತಿವಾದಿಸಿದ್ದು, ಅಲ್ಪಮತೀಯರ ಮೇಲೆ ಅಸಹನೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಮೇಲೆ ಔದಾರ್ಯತೆ ತೋರಿಸಿದ್ದು, ಖಾಸಗೀ ಸ್ವಾಮ್ಯದ ಹಿತರಕ್ಷಣೆ ಮಾಡಿದ್ದು, ಅಧಿಕಾರದಲ್ಲಿ ಇಲ್ಲದೇ ಅಧಿಕಾರ ಮಾತ್ರ ನಡೆಸಿದ್ದು, ಇವೇ ಮೊದಲಾದವುಗಳು ಸಂಜಯಗಾಂಧಿಯ ಜೀವನ ಮೌಲ್ಯಗಳೆಂದು ಮರೆಯಬಾರದು. ಇವುಗಳು ಎಷ್ಟು ಜನವಿರೋಧಿಯಾಗಿದ್ದವು ಎಂಬುದಕ್ಕೆ, 1977ರ ಚುನಾವಣೆಯಲ್ಲಿ ಸಂಜಯಗಾಂಧಿ — ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷವು ಸೋತು ಅಧಿಕಾರ ಕಳೆದುಕೊಂಡಿರುವುದೇ ಸಾಕ್ಷಿ. ಸದ್ಯ ಅಸ್ಥಿರತೆಯಿಂದ ಆಂತರಿಕ ಕಚ್ಚಾಟದಲ್ಲಿ ತೊಡಗಿರುವುದೂ ಸಾಕ್ಷಿ. ಹಳೆಯ ವ್ಯವಸ್ಥೆಯನ್ನು, ಮೌಲ್ಯಗಳನ್ನು ಇನ್ನಷ್ಟೂ ನಿಷ್ಠೂರವಾಗಿ, ನಿರ್ದಾಕ್ಷಿಣ್ಯವಾಗಿ, ಬಲಪ್ರಯೋಗದಿಂದ ಮುಂದುವರಿಸಲು ಸಂಜಯಗಾಂಧಿ ಯುವಜನರನ್ನು ಸಂಘಟಿಸುತ್ತಿದ್ದ ಎನ್ನುವುದನ್ನು ಮರೆಯಬಾರದು. ಪುರೋಗಾಮಿ ಶಕ್ತಿಗಳು ಪ್ರಬಲಗೊಳ್ಳುವವರೆಗೂ ಇಂತಹ ಪ್ರತಿಗಾಮಿ ಶಕ್ತಿಗಳೂ ವಿಚಾರಗಳೂ ಸಂಜಯಗಾಂಧಿಯ ಮರಣಾನಂತರವೂ ಚುರುಕಾಗಿರುವುವು.

ನ್ಯಾಯಾಂಗ ವಿಚಾರಣೆ ಕೈ ಬಿಟ್ಟದ್ದೇಕೆ?

ವಿಮಾನ ಹಾರಾಟದ ನೀತಿ ನಿಯಮಗಳನ್ನು ಸಂಜಯಗಾಂಧಿಯು ಪರಿಪಾಲಿಸಿದ್ದರೆ, ನಾಗರಿಕ ವಿಮಾನ ಖಾತೆಯ ಸಲಹೆಯನ್ನು ಕೇಳಿದ್ದರೆ, ದುರ್ಘಟನೆ ಸಂಭವಿಸುತ್ತಿದ್ದಿಲ್ಲ, ಸಂಜಯಗಾಂಧಿಯ ದುರ್ಮರಣವಾಗುತ್ತಿರಲಿಲ್ಲ. ನಾಗರಿಕ ವಿಮಾನ ಖಾತೆ ಸಂಜಯಗಾಂಧಿಯು ಅನುಸರಿಸುತ್ತಿದ್ದ ಅಪಾಯಕಾರಿ ವಿಮಾನ ಹಾರಾಟದ ವಿರುದ್ಧ ಎಚ್ಚರಿಕೆ ನೀಡುತ್ತಲೇ ಇತ್ತು. ನಾಗರಿಕ ವಿಮಾನ ಸಾರಿಗೆಯ ಮಂತ್ರಿ ಖಾತೆಯು ಅವನನ್ನು ನಿಯಮವಿರೋಧಿ ವಿಮಾನ ಹಾರಾಟ ಮಾಡದಂತೆ ತಡೆದಿದ್ದರೂ ಆತ ಸಾಯುತ್ತಿದ್ದಿಲ್ಲ. ಸಂಜಯಗಾಂಧಿ ಮತ್ತು ಅವನ ಗೆಳೆಯ ಕ್ಯಾ. ಸುಭಾಸ್‌ಸಕ್ಸೇನ ಉಟ್ಟ ಪೈಜಾಮ, ಬನಿಯನ್, ಮತ್ತು ಮೆಟ್ಟಿದ ಚಪ್ಪಲಿಯಲ್ಲಿಯೇ ಯಾವ ರಕ್ಷಣಾ ಸಾಮಗ್ರಿಗಳಿಲ್ಲದೆ ಆದಿನ ಬೆಳಿಗ್ಗೆ ವಿಮಾನ ಹಾರಿಸಲು ಹೊರಟಿದ್ದರು. ಒಬ್ಬ ಆಟೋರಿಕ್ಷಾ ಚಾಲಕನೂ ಕೆಲವು ರಾಜ್ಯಗಳಲ್ಲಿ ಸೊಂಟಕ್ಕೆ ಬೆಲ್ಟ್ ತಲೆಗೆ ಶಿರಸ್ತ್ರಾಣ ಧರಿಸಬೇಕಾಗುವುದು, ಎಲ್ಲಾ ಸ್ಕೂಟರ್ ಮತ್ತು ಮೋಟರ್ ಸೈಕಲ್ ವಾಹಕರೂ ಶಿರಸ್ತ್ರಾಣ ಧರಿಸುವುದು ಕಡ್ಡಾಯವಾಗಿದೆ. ಆದರೆ, ವಿಮಾನ ನಡೆಸುವ ಸಂಜಯಗಾಂಧಿಗೆ ಇಂತಹ ಯಾವ ನಿಯಮಗಳೂ ಅನ್ವಯಿಸುವುದಿಲ್ಲವೆ? ಆತನಿಗೆ ಹೇಳಲು ಧೈರ್ಯ ಯಾರಿಗಿದೆ?

ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಶನ್ (DGCA) ಏರ್ ಮಾರ್ಷಲ್ ಜೆ. ಝಹೀರ್ ಸಂಜಯಗಾಂಧಿ ಸತತವಾಗಿ ವಿಮಾನ ಹಾರಾಟದ ನಿಯಮಗಳನ್ನು ಉಲ್ಲಂಘಿಸುತ್ತಿರುವ ಕುರಿತು, ರಕ್ಷಣಾ ವ್ಯವಸ್ಥೆ ನೀಡಲು ಸಂಜಯಗಾಂಧಿಯು ತನ್ನ ವಿಮಾನ ಪ್ರಯಾಣವನ್ನು ಮುಂಚಿತವಾಗಿ DGCAಗೆ ಸಲ್ಲಿಸದೇ ಇರುವ ಕುರಿತು ನಾಗರಿಕ ವಿಮಾನಸಾರಿಗೆಯ ಮಂತ್ರಿ ಖಾತೆಗೆ ಒಂದು ವಿವರವಾದ ಪತ್ರ ಬರೆಯಲು ಧೈರ್ಯ ಮಾಡಿದರು. ಆ ಪತ್ರವು ಆಗಿನ ಮಂತ್ರಿ ಜೆ. ಬಿ. ಪಾಟ್ನಾಯಕ್ ಕೈಸೇರಿ, ಮುಂದೆ ಇಂದಿರಾಗಾಂಧಿ ಹಾಗೂ ಸಂಜಯಗಾಂಧಿಯ ಕೈಸೇರಿತು. ಕೆಲವೇ ದಿನಗಳಲ್ಲಿ ಏರ್ ಮಾರ್ಷಲ್ ಜೆ. ಝಹೀರ್ ಅವರನ್ನು ಕೆಲಸಬಿಟ್ಟು ದೀರ್ಘ ರಜೆಯಲ್ಲಿ ಹೊರಟುಹೋಗಲು ಸರಕಾರದಿಂದ ಆದೇಶ ಬಂದಿತು! ಅವರ ಬದಲಿಗೆ ಕೆಲವೇ ತಾಸುಗಳಲ್ಲಿ DGCA ಯ ಡೆಪ್ಯುಟಿ ಡೈರೆಕ್ಟರಾದ ಜಿ. ಆರ್. ಕತ್‌ಪಾಲಿಯಾ ಅವರನ್ನು ನೇಮಿಸಲಾಯಿತು! ಮುನ್ನೆಚ್ಚರ ಕೊಟ್ಟವರಿಗೆ ಸಿಕ್ಕಿದ ಪ್ರತಿಫಲವಿದು. ಪರಿಣಾಮ? ಕೊನೆಗೂ ವಿಮಾನ ಹಾರಾಟದ ಹಲವಾರು ನಿಯಮಗಳನ್ನು ಉಲ್ಲಂಘಿಸಿ ಮನರಂಜನಾ ವಿಮಾನ ಹಾರಾಟದಲ್ಲಿ ತೊಡಗಿರುವಾಗಲೇ ದುರ್ಘಟನೆ ಸಂಭವಿಸಿ ಸಂಜಯಗಾಂಧಿ ಮತ್ತು ಕ್ಯಾ. ಸುಭಾಸ್ ಸಕ್ಸೇನಾ ಅವರ ದುರ್ಮರಣ ಸಂಭವಿಸಿತು.।

ತಾ. 23-6-80ರಂದು ಅಪಘಾತ ಸಂಭವಿಸಿದರೆ, ಮರುದಿನವೇ ಕೇಂದ್ರ ನೌಕೆ ಮತ್ತು ಸಾರಿಗೆ ಮಂತ್ರಿ ಎ. ಪಿ. ಶರ್ಮ ಅವರು ನ್ಯಾಯಾಂಗ ವಿಚಾರಣೆ ನಡೆಸುವುದಾಗಿ ಘೋಷಿಸಿದ್ದರೂ, ತಾ. 27ರಂದು ನ್ಯಾಯಾಂಗ ವಿಚಾರಣಾ ಸಮಿತಿಯನ್ನೇ ರದ್ದುಗೊಳಿಸಿದರು ! ಕಾರಣ, ಡಿ. ಜಿ. ಸಿ. ಎ. ಯು ಆಂತರಿಕ ವಿಚಾರಣೆ ನಡೆಸುತ್ತಿದೆ ಎಂದು. ಇದು ಕ್ಷುಲ್ಲಕ ಕಾರಣ. ಆಂತರಿಕ ವಿಚಾರಣೆಯು ಖಾಸಗಿಯಾಗಿ ನಡೆಯುವುದಲ್ಲದೆ, ಅಪಘಾತದ ಸದ್ಯದ ಕಾರಣಗಳನ್ನಷ್ಟೇ ವಿಚಾರಿಸುವುದು. ವಿಚಾರಿಸುವ ಅಧಿಕಾರಿಗಳು ಡಿ. ಜಿ. ಸಿ. ಎ. ಯ ಮುಖ್ಯ ಅಧಿಕಾರಿಗಳ ಅಧೀನದಲ್ಲಿರುವುದರಿಂದ ಅವರ ಮೇಲಿನ ಆಪಾದನೆಗಳಿದ್ದರೆ ಅವುಗಳನ್ನು ಬಯಲುಗೊಳಿಸಲು ಹಿಂಜರಿಯುವುದು. ನ್ಯಾಯಾಂಗ ವಿಚಾರಣೆಯಲ್ಲಿ ಒಬ್ಬ ಹೈಕೋರ್ಟ್ ನ್ಯಾಯಾಧೀಶ, ಇಬ್ಬರು ವಿಮಾನ ಪಡೆಯ ಅಧಿಕಾರಿಗಳು ಮತ್ತು ಒಬ್ಬ ರಕ್ಷಣಾ ಖಾತೆಯ ಅಧಿಕಾರಿ ನೇಮಕಗೊಂಡಿದ್ದರು, ಅವರ ವಿಚಾರಣೆ ಬಹಿರಂಗವಾಗಿರುತ್ತಿತ್ತು. ಅವರು, ಅಪಘಾತಕ್ಕೊಳಗಾದ ವಿಮಾನವನ್ನು ಯಾರು ಆಮದು ಮಾಡಿದರು, ಯಾಕೆ ಆಮದು ಮಾಡಿದರು, ಆಮದು ನಿಯಮಗಳ ಉಲ್ಲಂಘನೆ ಆಗಿದೆಯೇ, ವಿಮಾನ ದಾನವಾಗಿ ಬಂತೇ, ಹಣ ಕೊಟ್ಟವರು ಯಾರು, ಅದನ್ನು ಡೆಲ್ಲಿಯ ಫ್ಲ್ಯಾಯಿಂಗ್ ಕ್ಲಬ್‌ಗೆ ಸೇರಿಸಲು ಅನುಮತಿ ಕೊಟ್ಟವರಾರು, ಆ ಪಿಟ್ಸ್ ವಿಶೇಷ ವಿಮಾನ ಹಾರಿಸಲು ಸಂಜಯಗಾಂಧಿಗೆ ಲ್ಯಾಸನ್ಸ್ ಇತ್ತೇ, ಆ ವಿಮಾನದಲ್ಲಿ ಕಸರತ್ತು (ಪಲ್ಟಿ ಹಾಕಲು) ಮಾಡಲು ಆತನಿಗೆ ಸಾಕಷ್ಟು ಪರಿಣತಿ ಇತ್ತೇ, ಕ್ಲಬ್‌ನ ಆಂತರಿಕ ಆಡಳಿತಾಧಿಕಾರಿಗಳ ನೇಮಕವು ಕೋರ್ಟು ಸುಪ್ರೀಂ ಕೋರ್ಟಿನಲ್ಲಿ ವಿವಾದಕ್ಕೊಳಗಾಗಿರುವಾಗಲೇ ಅಂತಹ ವಿಶೇಷ ವಿಮಾನ ಒಂದನ್ನು ಕ್ಲಬ್‌ಗೆ ಸೇರಿಸಿದ್ದು ಹೇಗೆ, ಎಂಬಿತ್ಯಾದಿ ವಿಷಯಗಳೆಲ್ಲವನ್ನೂ ನ್ಯಾಯಾಂಗ ವಿಚಾರಣೆಯಲ್ಲಿ ಪರಿಶೀಲಿಸಲಾಗುತ್ತಿತ್ತು.

(7ನೇ ಪುಟ ನೋಡಿ)

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

ಇ. ಎಂ. ಎಸ್. ನಂಬೂದಿರಿಪಾಡ್

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಆಧುನಿಕ ಬುದ್ಧಿಜೀವಿಗಳ ಉಗಮ :

ಒಂದು ಸಣ್ಣ ಗುಂಪು ಹೊಸ (ಬ್ರಿಟಿಷ್) ಆಡಳಿತಗಾರರ ಜೀವನ ವಿಧಾನವನ್ನು, ಸಂಸ್ಕೃತಿಯನ್ನು ಅನುಕರಿಸಿ "ಆಂಗ್ಲೀಕರಣ"ಗೊಂಡರು. ಬ್ರಿಟಿಷ್ ಆಡಳಿತಗಾರರು ಇವರನ್ನು ತಮ್ಮ ಆಡಳಿತ, ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಸೇರಿಸಿಕೊಂಡರು. ಆದ್ದರಿಂದ ಅವರೇ ಒಂದು ಕೇಂದ್ರಬಿಂದುವಾಗಿ ಅವರ ಸುತ್ತ ಒಂದು ಹೊಸ ವರ್ಗ ಎಂದರೆ ಬೂರ್ಜ್ವಾ ವರ್ಗ ಕೊನೆಗೆ ರೂಪುಗೊಂಡಿತು. ಇದಕ್ಕೆ ಸಮಾನಾಂತರದಲ್ಲಿ ಕ್ರಮೇಣ ನಾಶಗೊಂಡು ದಿವಾಳಿ ಎದ್ದ ಅಧಿಕ ಸಂಖ್ಯೆಯ ಜನತೆ ಎಂದರೆ ರೈತರು, ಕುಶಲ ಕೆಲಸಗಾರರು, ಬ್ರಿಟಿಷರ ಪೂರ್ವ ಸಮಾಜದಲ್ಲಿದ್ದ ವೃತ್ತಿ ಗುಂಪುಗಳು ಇವರೆಲ್ಲರೂ ಇದ್ದರು.

ವಿದೇಶಿ ದೊರೆಗಳ ಮೇಲುಗೈ ಇದ್ದ ಹೊಸ ಬೂರ್ಜ್ವಾ ಸಮಾಜದಲ್ಲಿ, ಮೊದಲಿನ ವರ್ಗವು ಅದರಲ್ಲೊಂದು ಸ್ಥಾನವನ್ನು ಪಡೆಯಬಲ್ಲ ಕ್ರಮಬದ್ಧ ಮತ್ತು ಅನಿರ್ಬಾಧಿತ ಬೆಳವಣಿಗೆಯ ವಿಶಾಲ ದೃಷ್ಟಿಕೋನ ಹೊಂದಿತ್ತು. "ಆಧುನೀಕರಣ"ದ ಮೊದಲಿಗರು ಇವರೇ ಆದರು. ಇದು ನಿಸ್ಸಂದೇಹವಾಗಿ ಭಾರತದಾದ್ಯಂತ ಇರುವ ಅಂಶವಾಗಿತ್ತು. ಇದು ವಾಸ್ತವವಾಗಿ ಕೇರಳಕ್ಕಿಂತ ಹೆಚ್ಚಾಗಿ ಬಂಗಾಳ, ಮಹಾರಾಷ್ಟ್ರ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಹೆಚ್ಚು ಪ್ರಬಲವಾಗಿ ಮತ್ತು ಪ್ರಭಾವಶಾಲಿಯಾಗಿ ಇತ್ತು.

ಭಾರತದಲ್ಲಿ ಈ ಹೊಸವರ್ಗ ಅಥವಾ ಅಂತಸ್ತಿನ ಉದಯದ ಮೊದಲ ಸ್ತರರೂಪವು ಒಂದು ಶಕ್ತಿಯಾದದ್ದು ಬಂಗಾಳದಲ್ಲಿ 19ನೇ ಶ.ದ ಪ್ರಾರಂಭದಲ್ಲಿ ಹುಟ್ಟಿದ ಬ್ರಹ್ಮ ಸಮಾಜದ ಚಳುವಳಿಯ ಮೂಲಕ ರಾಮಮೋಹನ್ ಮತ್ತು ಅವನ ಸಹಚರಿಗಳು ಆಧುನೀಕರಣವನ್ನು ಬಂಗಾಳದಲ್ಲಿ ಮಾತ್ರವಲ್ಲ ದೇಶದಾದ್ಯಂತ ಮಾಡಿದ ಮೊದಲಿಗರು. ಅವರಿಗೆ ಹಳೆಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ತೀವ್ರ ತಿರಸ್ಕಾರವಿತ್ತಲ್ಲದೆ ಬ್ರಿಟಿಷರ ಕೈ ಕೆಳಗಿದ್ದ ಬೂರ್ಜ್ವಾ ಸಮಾಜ ವ್ಯವಸ್ಥೆಯ ಬಗ್ಗೆ ಗೌರವವಿತ್ತು. ಆದ್ದರಿಂದಲೇ ಬೇರೆ ವರ್ಗಗಳನ್ನು ವಿರೋಧಿಸಿ ರಾಮಮೋಹನ್ ಮತ್ತು ಅವನ ಸಹಚರಿಗಳು 1957ರ ಚಾರಿತ್ರಿಕ ದಂಗೆ ಮತ್ತು ಪ್ರತಿಭಟನೆಯಲ್ಲಿ ಭಾಗವಹಿಸಲಿಲ್ಲ. ಬಂಗಾಳದಲ್ಲಿ ರಾಮಮೋಹನರಿಂದ ಬೆಳಗಿದ ಈ ಪಂಜು ಮುಂದೆ ಜ್ಯೋತಿಬಾಫುಲೆಯಿಂದ ಮಹಾರಾಷ್ಟ್ರದಲ್ಲಿ ಮುಂದುವರೆಯಿತಷ್ಟೇ ಅಲ್ಲದೆ ಅದಕ್ಕೆ ಸಂವಾದಿಯಾಗಿ ಅನೇಕ ಚಳುವಳಿಗಳು ದೇಶದ ಇತರ ಭಾಗಗಳಲ್ಲಿ ಉಂಟಾದುವು. ಕೇರಳವೂ ಕೂಡ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಈ ಸ್ಥಿತಿಯನ್ನು ಎದುರಿಸಿತು.

ಜಾತಿ ಮತ್ತು ಕೋಮುಗಳ ಆಧಾರದ ಮೇಲೆ ನಿಂತಿದ್ದ ಹಳೆಯ ಸಾಮಾಜಿಕ ವ್ಯವಸ್ಥೆ ಏನೇ ಆದರೂ, ಆಧುನೀಕರಣದ ವಿಧಾನದ ಮೇಲೆ ತನ್ನ ಪ್ರಭಾವವನ್ನು ಬೀರದೆ ಇರಲಿಲ್ಲ. ಹೊಸ ವರ್ಗಗಳ ಉಗಮ ಮತ್ತು ಹೊಸ ಚಳುವಳಿಯ ವಿಧಾನಗಳು ಜಾತಿ-ಉಪಜಾತಿ ಮತ್ತು ಧಾರ್ಮಿಕ ಸಮೂಹಗಳನ್ನು ಮೀರಿಹೋದರೂ, ಬ್ರಿಟಿಷ್ ಪೂರ್ವ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿ ಜಾತಿ-ಉಪಜಾತಿ ಮತ್ತು ಕೋಮುಗಳಲ್ಲಿ ಕೆಲವು ಮಿಕ್ಕವಕ್ಕಿಂತ ಸುಲಭವಾಗಿ ಆಧುನೀಕರಣಕ್ಕೆ ಒಗ್ಗಿ ಹೋದವು. ಆದ್ದರಿಂದ ಅವು ಹೆಚ್ಚು ಲಾಭವನ್ನು ಪಡೆದವು. ಯಾವ ಜಾತಿಗಳು ಹಿಂದೆ ಬಿದ್ದವೋ ಅವು ಅನೇಕ ವಿಧದಲ್ಲಿ ತೊಂದರೆಗೆ ಸಿಕ್ಕಿಕೊಂಡವು ಜಾತಿ-ಉಪಜಾತಿ ಮತ್ತು ಧಾರ್ಮಿಕ ಸಮೂಹಗಳ ನಡುವಿನ ಅಸಾಂಗತ್ಯದ ಮೂಲ ಈಗ ಹೆಸರಾಗಿರುವ "ಮುಂದುವರೆದ" ಮತ್ತು "ಹಿಂದುಳಿದ" ಕೋಮುಗಳ ನಡುವಿನ ವ್ಯತ್ಯಾಸದೊಳಗಿದೆ.

ಸಿರಿಯನ್ ಕ್ರೈಸ್ತರು ಈ ದಿಸೆಯಲ್ಲಿ ತೀರ ಲಾಭ ಪಡೆದವರಾಗಿದ್ದರು. ಹೊಸ ರೀತಿಯ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅವರಿಗೆ ತೀರ ಸುಲಭವಾಗಿತ್ತು. ಕೇರಳದ ಬಹುಪಾಲು ಕ್ರೈಸ್ತರು ಬ್ರಿಟಿಷರ ಆಂಗ್ಲಿಕನ್ ಚರ್ಚಿಗಿಂತ ಭಿನ್ನವಾಗಿದ್ದರೂ ಕೂಡ ಬ್ರಿಟಿಷ್ ಆಡಳಿತಗಾರರು ಯಾವ ಜಾತಿಗೆ ಸೇರಿದ್ದರೋ ಅದೇ ಧಾರ್ಮಿಕ ಸಂಸ್ಥೆಗೆ ಇವರೂ ಸೇರಿದ್ದರು. ಮಡಿವಂತ ಮತ್ತು ಕ್ಯಾಥೋಲಿಕ್ ಪಂಥಕ್ಕೆ ಸೇರಿದ ಈ ಕ್ರೈಸ್ತರ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು ಬ್ರಿಟಿಷ್ ಪ್ರಾಟೆಸ್ಟಂಟ್ ಆಚರಣೆಗಳಿಗಿಂತ ಭಿನ್ನವಾಗಿತ್ತು. ಆದರೂ ಅವರು ಜಾತಿ ಮತ್ತು ಪಾಳೇಗಾರಿಕೆಯ ಹಿಡಿತದಲ್ಲಿದ್ದ ಕೇರಳ ಸಮಾಜಕ್ಕಿಂತ ಈ ವಿದೇಶೀ ಆಡಳಿತಗಾರರಿಗೆ ಹತ್ತಿರವಾಗಿದ್ದರು. ಆದ್ದರಿಂದ ಆಧುನಿಕ ಶಿಕ್ಷಣ, ಹೊಸ ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದು ಅವರಿಗೆ ತೀರ ಸಹಜವಾಯಿತು. ಕ್ರೈಸ್ತ ಮಿಷನರಿಗಳು ಆಧುನೀಕರಣದ ಪ್ರಧಾನವಾಹಕವಾದ ಮುದ್ರಣಯಂತ್ರಗಳನ್ನು ಉಪಯೋಗಿಸುವಲ್ಲಿ ಮೊತ್ತಮೊದಲಿಗರಾದರು. ಇದರ ಜೊತೆ ಬೇರೆ ಬೇರೆ ವಿಧಾನಗಳನ್ನು ಅನುಸರಿಸಿದ್ದರಿಂದ ಅವರು ಬ್ರಿಟಿಷ್ ಆಡಳಿತಗಾರರ ಹಿಡಿತದಲ್ಲಿದ್ದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪಾಲುದಾರರಾದರು.

ಸಿರಿಯನ್ ಕ್ರೈಸ್ತರಿಗೆ ಸ್ವಲ್ಪ ಹಿಂದೆ ಇದ್ದರೂ ನಾಯರ್‌ಗಳು ಮತ್ತು ತಮಿಳು ಬ್ರಾಹ್ಮಣರು (ಕೇರಳದ ಬ್ರಿಟಿಷ್ ಪೂರ್ವ ಆಳುವ ವರ್ಗಗಳಿಗೆ ಇವರು ವೃತ್ತಿ ಅಂಶಗಳನ್ನು ನೀಡಿದ್ದರು) ಅವರನ್ನು ಕೂಡಲೇ ಅನುಕರಿಸಿದರು. ಅವರಿಗೂ ಕೂಡ ಆಧುನೀಕರಣವನ್ನು ಒಪ್ಪಿಕೊಳ್ಳುವುದು ಸ್ವಲ್ಪ ಸುಲಭವಾಗಿತ್ತು. ಏಕೆಂದರೆ ಅವರು ಹಳೆಯ ಸಾಮಾಜಿಕ ವ್ಯವಸ್ಥೆಯ ವೃತ್ತಿ ಅಂಶದ ಮುಖ್ಯರಾಗಿದ್ದರು. ಹಳೆಯ ವೃತ್ತಿಯಿಂದ ಹೊಸದಕ್ಕೆ ಬದಲಾಯಿಸುವುದನ್ನು ಮಾತ್ರ ಅವರು ಮಾಡಿದರು. ಹಳೆಯ ಅಧಿಕಾರಶಾಹಿಯ ಸಂಬಂಧಗಳನ್ನು ಕಡಿದುಕೊಂಡರು. ಸಿರಿಯನ್ ಕ್ರೈಸ್ತರ ಜೊತೆ ಸೇರಿ ಅವರು ಆಧುನೀಕರಣದ ಪ್ರಕ್ರಿಯೆಗೆ ಅಥವಾ ದೇಶದ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದಲ್ಲಿ ಆಧುನಿಕ ಧೋರಣೆಗಳು ಬೆಳೆಯುವುದಕ್ಕೆ ಅವರು ತಮ್ಮ ಪಾಲನ್ನೂ ನೀಡಿದರು.

ಆದರೆ ಸಿರಿಯನ್ ಕ್ರೈಸ್ತರು ಮತ್ತು ನಾಯರ್, ತಮಿಳು ಬ್ರಾಹ್ಮಣರ ನಡುವೆ ಸಂಪೂರ್ಣ ಸೌಹಾರ್ದ ಇರಲಿಲ್ಲ. ಏಕೆಂದರೆ, ಬ್ರಿಟಿಷ್ ಪೂರ್ವ ಸಾಮಾಜಿಕ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮ ಜಾತಿ ಹಿಂದೂಗಳದೇ ಪ್ರಾಬಲ್ಯವಿದ್ದು, ಅದರಲ್ಲೂ ತಿರುವಾಂಕೂರು-ಕೊಚ್ಚಿನ್‌ಗಳ ರಾಜ ಸಂಸ್ಥಾನಗಳಲ್ಲಿ ಇದು ಅತಿ ಹೆಚ್ಚಾಗಿದ್ದು, ಅದರ ರಾಜರು ಶ್ರದ್ಧಾವಂತ ಹಿಂದುಗಳಾಗಿದ್ದರು. ಆದ್ದರಿಂದ ನಾಯರ್ ಮತ್ತು ತಮಿಳು ಬ್ರಾಹ್ಮಣರಿಗೆ ಇಲ್ಲದಿದ್ದ ಕೆಲವು ತೊಂದರೆಗಳು ಸಿರಿಯನ್ ಕ್ರೈಸ್ತರಿಗೆ ಇದ್ದವು. ಅತ್ಯಂತ ಮುಂದುವರೆದ ಸಿರಿಯನ್ ಕ್ರೈಸ್ತನೂ ಕೂಡ ಕೆಲವು ಅಂಶಗಳಲ್ಲಿ ಹಿಂದೂ ಸಮಾಜದ ಕೆಳಜಾತಿಗೆ ಸಮಾನವೆಂದು ಪರಿಗಣಿತವಾಗುತ್ತಿದ್ದನು. ಈ ಎರಡು ರಾಜ ಸಂಸ್ಥಾನಗಳ ಹೊಸ ರಾಜಕೀಯ ವ್ಯವಸ್ಥೆಯಲ್ಲಿ ನಾಯರ್ ಮತ್ತು ತಮಿಳು ಬ್ರಾಹ್ಮಣರು ಅತ್ಯುಚ್ಚ ಸ್ಥಾನಗಳಿಗೆ ಏರಿದರೆ, ಸಿರಿಯನ್ ಕ್ರೈಸ್ತರು ಕೆಲವು ಸ್ಥಾನಗಳಿಂದ ದೂರ ಇರಿಸಲ್ಪಟ್ಟರು.

ಇದರ ಜೊತೆಗೆ, ಆ ಕಾಲದಲ್ಲಿ ಸಿರಿವಂತ ಸುಸಂಸ್ಕೃತ ಸಿರಿಯನ್ ಕ್ರೈಸ್ತರು ಮತ್ತು ಹಿಂದುಳಿದ ಕ್ರೈಸ್ತ ಜನತೆಯ ನಡುವೆ ಒಂದು ಘರ್ಷಣೆಯೂ ನಡೆಯುತ್ತಿತ್ತು. ಮೊದಲಿನ ಗುಂಪು, ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ನಾಯರ್ ಮತ್ತು ತಮಿಳು ಬ್ರಾಹ್ಮಣರಿಗೆ ಹೆಚ್ಚು ಕಡಿಮೆ ಸಮಾನವಾದ ಸ್ಥಾನಪಡೆದಿದ್ದರೆ, ಹಿಂದುಳಿದವರು ಹಿಂದೂ ಸಮಾಜದ ಕೆಳಹಂತ ಜಾತಿಗಳಿಗೆ ಸಮಾನವಾಗಿ ಕಾಣಲ್ಪಡುತ್ತಿದ್ದರು. ತಿರುವಾಂಕೂರು ಮತ್ತು ಕೊಚ್ಚಿನ್‌ಗಳ ಸಿರಿಯನ್ ಕ್ರೈಸ್ತರು (ಮಡಿವಂತ ಮತ್ತು ಕ್ಯಾಥೋಲಿಕ್ ಪಂಥಗಳಿಗೆ ಸೇರಿದವರು). ಧರ್ಮಪ್ರಸಾರಕ ಸಂತ ಥಾಮಸ್‌ನಂಥವನೇ ಮತಾಂತರಗೊಳಿಸಿದ ಉನ್ನತ ಜಾತಿ ಹಿಂದುಗಳ ಸಂತತಿ ನಾವೆಂದು ಹೆಮ್ಮೆ ಪಡತೊಡಗಿದ ನಂತರ ಇದು ಮತ್ತಷ್ಟು ಬಲವಾಯಿತು. ಸಿರಿಯನ್ ಅಲ್ಲದ ಕ್ರೈಸ್ತರನ್ನು ಕೆಳಮಟ್ಟದವರೆಂದು ನೋಡಲಾಗುತ್ತಿತ್ತು. ಏಕೆಂದರೆ, ಅವರನ್ನು ಇತ್ತೀಚಿನ ಶತಮಾನದಲ್ಲಿ ಕೆಳಜಾತಿಗಳಿಂದಲೇ ಹೆಚ್ಚು ಮತಾಂತರಗೊಳಿಸಲಾಗಿತ್ತು. ಬ್ರಿಟಿಷರು ಆಳುತ್ತಿದ್ದ ಕೇರಳದ ಭಾಗದಲ್ಲಿ (ಮಲಬಾರ್) ಈ ಕ್ರೈಸ್ತರೇ ಹೆಚ್ಚಾಗಿದ್ದರು.

ನಾಯರ್‌ಗಳಲ್ಲದ ಉನ್ನತ ಜಾತಿಯ ಹಿಂದೂಗಳು ಅದರಲ್ಲೂ, ನಂಬೂದಿರಿಗಳು, ಮತ್ತು ಮುಸ್ಲಿಮರು, ಆಧುನಿಕ ಕೇರಳದಲ್ಲಿ ಸಿರಿಯನ್ ಕ್ರೈಸ್ತರು, ನಾಯರ್‌ಗಳು ಮತ್ತು ತಮಿಳು ಬ್ರಾಹ್ಮಣರನ್ನು ಅನುಸರಿಸುವ ಸ್ಥಿತಿಯೊಳಗೆ ಇದ್ದರು. ಮೊದಲಿನ ಗುಂಪಾದ ನಂಬೂದಿರಿ ಹಿಂದುಗಳು ಬ್ರಿಟಿಷ್ ಪೂರ್ವ ಸಮಾಜದಲ್ಲಿ ನಾಯರ್ ಮತ್ತು ತಮಿಳರ ಹಾಗೆ ವೃತ್ತಿಪರರಾಗಿದ್ದರು. ಮುಸ್ಲಿಮರು ಸಿರಿಯನ್ ಕ್ರೈಸ್ತರ ಹಾಗೆ ವ್ಯಾಪಾರ, ಭೂಮಾಲೀಕತ್ವ ಮತ್ತು ಇತರ ಕೆಲಸಗಳಲ್ಲಿ ತೊಡಗಿದ್ದರು. ಆದ್ದರಿಂದ ನಾಯರ್, ತಮಿಳು ಬ್ರಾಹ್ಮಣರು ಮತ್ತು ಸಿರಿಯನ್ ಕ್ರೈಸ್ತರ ಹಾಗೆ ಇಷ್ಟಪಟ್ಟರೆ ಇವರೂ ಆಧುನಿಕವಾಗುವ ಅವಕಾಶವಿತ್ತು.

ಆದರೆ ಅವರಿಗೆ ಅದು ಬೇಕಿರಲಿಲ್ಲ. ನಂಬೂದಿರಿಗಳು ಮತ್ತು ಇತರ ನಾಯರ್ ಅಲ್ಲದ ಹಿಂದೂಗಳು ತಾವೇ ಬೆನ್ನೆಲುಬಾಗಿದ್ದ ಬ್ರಿಟಿಷ್ ಪೂರ್ವ ಸಮಾಜದ ಬಗ್ಗೆ ತುಂಬಾ ಹೆಮ್ಮೆ ಮತ್ತು ಅಸೂಯೆಯುವರಾಗಿದ್ದರು. ಆದ್ದರಿಂದ ಹೊಸ ಬ್ರಿಟಿಷ್ ಆಳಿಕೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲುಗೈ ಆಗಿದ್ದ "ಉನ್ನತ ವರ್ಗ"ದವರ ಬಗ್ಗೆ ತಿರಸ್ಕಾರ ತಳೆದಿದ್ದರು. ಮುಸ್ಲಿಮರೂ ಸಹ ಬ್ರಿಟಿಷ್ ಆಳುವ ವರ್ಗಗಳ ಬಗ್ಗೆ ದ್ವೇಷ ಮತ್ತು ತಿರಸ್ಕಾರ ಹೊಂದಿದ್ದರು. ಇಬ್ಬರೂ ತಮ್ಮ ಹಳೆಯ ಸಾಮಾಜಿಕ-ರಾಜಕೀಯ ದೃಷ್ಟಿಕೋನಕ್ಕೇ ಕಟ್ಟುಬಿದ್ದು ಹಿಂದುಳಿದರು. ಆಧುನೀಕರಣದ ಸ್ಪರ್ಧೆಯಲ್ಲಿ ಬಹಳ ಹಿಂದಕ್ಕೆ ಉಳಿದರು. ಇದರ ಪರಿಣಾಮವಾಗಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದೆ ಉಳಿದದ್ದರಿಂದ, ಆಡಳಿತದ ಅನುಕೂಲ ಸ್ಥಾನಗಳನ್ನು ಪಡೆಯುವುದರಲ್ಲೂ ಅವರು ಹಿಂದೆಬಿದ್ದರು. ಆದರೆ ಅವರು ಪರಿಸ್ಥಿತಿಯನ್ನು ಒಮ್ಮೆ ಅರ್ಥಮಾಡಿಕೊಂಡ ತಕ್ಷಣ ಎಚ್ಚೆತ್ತರು. ಈಗ ಅನೇಕ ನಾಯರೇತರ ಉನ್ನತ ಜಾತಿ ಹಿಂದುಗಳು ಇತರ "ಮುಂದುವರೆದ" ಕೋಮಿನವರ ಸಮಾನ ಸ್ಥಾನದಲ್ಲಿ ಇದ್ದಾರೆ.

ಇದಕ್ಕೆ ವಿರುದ್ಧವಾದ ಸ್ಥಿತಿಯಲ್ಲಿ ಇಂದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ಕೋಮುಗಳಲ್ಲಿ ಸೇರಿಸಿರುವ ಮೊದಲಿನ "ಕೆಳಮಟ್ಟ"ದ ಜಾತಿಗಳು ಇವೆ. ಬ್ರಿಟಿಷ್ ಪೂರ್ವ ಸಮಾಜದಲ್ಲಿ ಅತ್ಯಂತ ದಬ್ಬಾಳಿಕೆಗೆ (ಆ ಪದದ ಪ್ರತಿಯೊಂದು ಅರ್ಥದಲ್ಲೂ) ಒಳಗಾದ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಇಂದಿಗೂ ತೀರ ಅನಾನುಕೂಲ ಪರಿಸ್ಥಿತಿಯಲ್ಲಿ ಇದ್ದಾರೆ. ಉಳಿದ ಹಿಂದುಳಿದ ಕೋಮಿನವರಾದ ಎಳವ, ವಿಶ್ವಕರ್ಮ, ಲ್ಯಾಟಿನ್ ಮತ್ತಿತರ ಹಿಂದುಳಿದ ಕ್ರೈಸ್ತರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಹೊಸ ಬ್ರಿಟಿಷ್ ದೊರೆಗಳು ಒದಗಿಸಿದ ಶೈಕ್ಷಣಿಕ ಪ್ರಗತಿಯ ಅವಕಾಶಗಳನ್ನು ಇವರು ಉಪಯೋಗಿಸಿಕೊಂಡು ಸರ್ಕಾರಿ ಸೇವೆಯಲ್ಲಿ ಸ್ಥಾನಗಳನ್ನು ಪಡೆಯಲು ಸಮರ್ಥರಾದರು. ಮೀಸಲಾತಿ ನಿಯಮದ ಸಹಾಯದಿಂದಲೂ ಇವರು ಸರ್ಕಾರಿ ಸೇವೆಯಲ್ಲಿ ಪ್ರಮುಖ ಸ್ಥಾನಗಳನ್ನು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯಲು ಸಾಧ್ಯವಾಯಿತು. ಈ ಅನುಕೂಲವೂ ಇರದಿದ್ದರೆ ಅವರು ಹಳೆಯ ಸಮಾಜದಲ್ಲಿ ಇದ್ದಷ್ಟೇ ಹಿಂದುಳಿದವರಾಗಿ ಇರುತ್ತಿದ್ದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೂ ಈ ಕ್ರಮಗಳಿಂದ ಸಹಾಯವಾಗಿದೆ. ಆದರೂ ಒಂದು ಜಾತಿಯಾಗಿ ಅವರಿಗೆ, ಇತರ ಹಿಂದುಳಿದ ಜಾತಿಗಳಂತೆ ಮುಂದುವರೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಇತರ ಹಿಂದುಳಿದ ಜಾತಿಗಳಿಗೂ ಮತ್ತು ಪರಿಶಿಷ್ಟ ಜಾತಿಗಳು ವರ್ಗಗಳಿಗೂ ನಡುವೆ ಒಂದು ಘರ್ಷಣೆ ಅಲ್ಲದಿದ್ದರೆ ವ್ಯತ್ಯಾಸವಂತೂ ಇದ್ದೇ ಇದೆ. ವಿವಿಧ ಹಿಂದುಳಿದ ಜಾತಿಗಳ ನಡುವೆಯೂ ಆ ವ್ಯತ್ಯಾಸ ಇದೆ.

(ಮುಂದುವರೆಯುವುದು)

ಪಶ್ಚಿಮ ಬಂಗಾಳ-ವಾಮರಂಗ ಸರ್ಕಾರದ ಮೂರು ವರ್ಷಗಳು

ಜ್ಯೋತಿಬಸು

ಪಶ್ಚಿಮ ಬಂಗಾಳದ ಚುನಾವಣೆಗಳಲ್ಲಿ ಅಪಾರ ಬಹುಮತ ಪಡೆದ ವಾಮರಂಗವು 1977ರ ಜೂನ್‌ನಲ್ಲಿ ಅಧಿಕಾರ ವಹಿಸಿಕೊಂಡಿತು. ಹಿಂದಿನ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದ ಆರ್ಥಿಕತೆ ಮತ್ತು ಸಾಮಾಜಿಕ-ರಾಜಕೀಯ ಜೀವನವು ವಿಪರೀತ ಹದಗೆಟ್ಟಿತ್ತು. 30 ವರ್ಷಗಳ ಕಾಂಗ್ರೆಸ್ ಆಡಳಿತ 1977ರಲ್ಲಿ ಕೊನೆಗೊಂಡಿತು. ಅತ್ಯಂತ ಚಾರಿತ್ರಿಕ ಮಹತ್ವವುಳ್ಳ ಈ ಘಟನೆಯನ್ನು ಸರಿಯಾಗಿ ಬೆಲೆಕಟ್ಟಬೇಕಾಗಿದೆ.

ಮೂರು ನಾಲ್ಕು ಅಥವಾ ಐದು ವರ್ಷಗಳ ಕಡಿಮೆ ಅವಧಿಯಲ್ಲಿ ಹಿಂದಿನ ಕಾಂಗ್ರೆಸ್ ಆಡಳಿತ ಬಿಟ್ಟುಹೋಗಿರುವುದು ಸರಿಪಡಿಸುವುದಕ್ಕಾಗುವುದಿಲ್ಲ. ಅದು ದೀರ್ಘಕಾಲದವರೆಗೆ ನಡೆಯುವ ಕಾರ್ಯ. ಅಲ್ಲದೆ ಈ ಸದ್ಯದ ಸಾಮಾಜಿಕ-ಆರ್ಥಿಕ ಚೌಕಟ್ಟಿನಲ್ಲಿ ಬಡತನ ಮತ್ತು ನಿರುದ್ಯೋಗ ಮುಂತಾದ ಮೂಲಭೂತ ಸಮಸ್ಯೆಗಳನ್ನು ನಿವಾರಿಸುತ್ತೇವೆಂಬ ಕಲ್ಪನೆ ನಮಗಿಲ್ಲ. ಆದರೆ ರಾಜಕೀಯವಾದ ಮನಸ್ಸು ಇದ್ದರೆ, ಈಗಿರುವ ಸಾಮಾಜಿಕ-ಆರ್ಥಿಕ ವ್ಯವಸ್ಥೆಯೊಳಗೂ ನರಳುವ ಜನತೆಗೆ ಸ್ವಲ್ಪ ಪರಿಹಾರ ನೀಡಲು ಸಾಧ್ಯ ಎಂದು ನಾವು ನಂಬುತ್ತೇವೆ.

ವಾಮರಂಗ ಸರ್ಕಾರ ಅನುಸರಿಸುತ್ತಿರುವ "36 ಅಂಶಗಳ ಕಾರ್ಯಕ್ರಮ" ಸಮಾಜವಾದಿ ಕಾರ್ಯಕ್ರಮ ಅಲ್ಲ. ಅದು 30 ವರ್ಷಗಳಿಂದ ಕಾಂಗ್ರೆಸ್ ದುರಾಡಳಿತದಲ್ಲಿ ಹಾನಿಗೀಡಾದ ರಾಜ್ಯದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ, ಉದ್ಯೋಗ ಅವಕಾಶಗಳ ಮೂಲಕ ಸಮಾಜದ ದುರ್ಬಲರಿಗೆ ಪರಿಹಾರ ನೀಡಬಯಸುವ ಮತ್ತು ಅನೇಕ ರಾಜಕೀಯ, ಆರ್ಥಿಕ, ಆಡಳಿತದ, ಹಣಕಾಸಿನ ಕ್ರಮಗಳ ಮೂಲಕ ನಿಜವೇತನದಲ್ಲಿ ಹೆಚ್ಚಳವನ್ನು ಮಾಡುವ ಒಂದು ವಿನೀತ ಕಾರ್ಯಕ್ರಮ. ಇದನ್ನು ಮುಂದುವರೆಸುವ ದಾರಿ ಸುಗಮವಾಗಿಲ್ಲ. ರಾಜ್ಯಗಳಿಗೆ ನಮ್ಮ ಸಂವಿಧಾನ ನೀಡುವ ಅಧಿಕಾರ ಸೀಮಿತವಾದದ್ದು. ಹಣಕಾಸಿನ ಸೌಲಭ್ಯವೂ ಅಷ್ಟೇ. ಎಲ್ಲ ಅಧಿಕಾರಗಳೂ, ಸಂಪನ್ಮೂಲಗಳೂ ಕೇಂದ್ರದ ಕೈಯಲ್ಲೇ ಇವೆ, ಆದ್ದರಿಂದಲೇ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಗೆ ವಾಮರಂಗ ಸರ್ಕಾರ ವಿಶೇಷ ಒತ್ತಾಯ ತರುತ್ತಿದೆ.

ಆದರೆ ಮಿತಿಗಳು ಹೇರಳವಾಗಿದ್ದರೂ ನಾವು ಸುಮ್ಮನೆ ಕೂತುಕೊಂಡಿಲ್ಲ. ಇತರ ಬೂರ್ಜ್ವಾ ಸರಕಾರಗಳು ಕೊಡುವ ಹಾಗೆ ನಾವೇನು ದೊಡ್ಡ ಭರವಸೆಗಳನ್ನು ಜನತೆಗೆ ಕೊಡುವುದಿಲ್ಲ. ಸ್ವರ್ಗವನ್ನು ಭೂಮಿಗಿಳಿಸುತ್ತೇವೆಂದು ಹೇಳಿಲ್ಲ. ಅಂಥ ಭರವಸೆಗಳನ್ನು ನೀಡಿ ವಾಮರಂಗ ಸರ್ಕಾರ ಜನತೆಯನ್ನು ವಂಚಿಸುವುದಿಲ್ಲ. ಯಾವುದನ್ನೂ ಅವರಿಂದ ಮುಚ್ಚಿಟ್ಟಿಲ್ಲ. ಆದರೆ 36 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಲು ನಾವು ಶಕ್ತಿಮೀರಿ ಶ್ರಮಿಸುತ್ತಿದ್ದೇವೆ. ರಾಜ್ಯಮಟ್ಟದಿಂದ ಗ್ರಾಮಮಟ್ಟದವರೆಗೆ ಎಲ್ಲ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆಯನ್ನು ತೊಡಗಿಸಿಕೊಳ್ಳಲು ನಮ್ಮ ಸರ್ಕಾರ ನಿರಂತರವಾಗಿ ಯತ್ನಿಸುತ್ತಿದೆ. ನಮ್ಮ ನಮ್ರ ವಿಜಯಗಳ ಮೂಲ ಇದೇ. ಇತರ ರಾಜ್ಯಗಳ ಬೂರ್ಜ್ವಾ ಪಕ್ಷಗಳ ಸರ್ಕಾರಗಳಿಗೂ ವಾಮರಂಗ ಸರ್ಕಾರಕ್ಕೂ ಇರುವ ವ್ಯತ್ಯಾಸ ಇದು.

ಅಧಿಕಾರ ವಹಿಸಿಕೊಂಡ ಕೂಡಲೇ ವಾಮರಂಗ ಸರ್ಕಾರ ಎಲ್ಲ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿದೆ. ವಾಮಪಕ್ಷಗಳ ಕಾರ್ಯಕರ್ತರನ್ನು ಕೊಲೆಗೈದವರೂ ಬಿಡುಗಡೆಯಾಗಿದ್ದಾರೆ. 36 ಅಂಶಗಳ ಕಾರ್ಯಕ್ರಮದಲ್ಲಿ ಈ ಅಂಶವೂ ಒಂದು. ಮೀಸಾ ಅನ್ನು ನಮ್ಮ ರಾಜ್ಯದಲ್ಲಿ ಬಳಸುವುದಿಲ್ಲ. ಜನತೆಯ ನಾಗರಿಕ ಹಕ್ಕುಗಳು ಈಗ ಪುನರ್‌ಸ್ಥಾಪನೆಯಾಗಿವೆ. ಪೋಲೀಸ್, ಆಡಳಿತಯಂತ್ರ ಇವುಗಳು ಜನಪರವಾಗಿರುವಂತೆ ನಾವು ಸುಧಾರಣೆ ಮಾಡುತ್ತಿದ್ದೇವೆ. ಹಳ್ಳಿಗಳಲ್ಲಿ ಗೇಣಿದಾರರು ತಮ್ಮ ಪಾಲನ್ನು ಮನೆಗೊಯ್ಯಲು ಇದರಿಂದ ಸಾಧ್ಯವಾಗಿದೆ.

ಕೈಗಾರಿಕಾ ವಿವಾದಗಳಲ್ಲಿ ಈಗ ಪಕ್ಷಪಾತ ಇಲ್ಲವಾಗಿದೆ, ಇದರಿಂದ ರಾಜ್ಯದಲ್ಲಿ ಅನೇಕ ಮುಷ್ಕರಗಳು ಶಾಂತಿಯುತವಾಗಿ ನಡೆದಿವೆ. ರಾಜ್ಯದ ಕಾರ್ಮಿಕ ಸಲಹಾ ಸಮಿತಿಯಲ್ಲಿ ಎಲ್ಲ ಟ್ರೇಡ್‌ಯೂನಿಯನ್‌ಗಳ ಪ್ರತಿನಿಧಿಗಳೂ ಇದ್ದಾರೆ. ಈ ಸಮಿತಿಯ ಸಲಹೆಗಳಿಗೆ ಸರ್ಕಾರ ತೀವ್ರಗಮನ ಕೊಡುತ್ತದೆ.

ಕೇಂದ್ರದ ಸಹಾಯವಿಲ್ಲದೆ ರಾಜ್ಯದ ಯೋಜನೆಗಳು ಮುಂದುವರೆಯುವುದಿಲ್ಲ. ಆದರೆ ಕೇಂದ್ರ ಈ ಬಗ್ಗೆ ದುರಾದೃಷ್ಟದಿಂದ ಸರಿಯಾದ ಮನೋಭಾವ ತಳೆದಿಲ್ಲ. ಗುಡಿಕೈಗಾರಿಕೆ ಕಚ್ಚಾವಸ್ತುಗಳು, ಸಿಮೆಂಟ್, ಸಕ್ಕರೆ, ಡೀಸೆಲ್, ಸೀಮೆಎಣ್ಣೆ ಎಲ್ಲ ಸರಬರಾಜಿನಲ್ಲೂ ಕೇಂದ್ರವು ಈ ರಾಜ್ಯದ ಬಗ್ಗೆ ಪ್ರತ್ಯೇಕ ಧೋರಣೆ ತಾಳಿದೆ.

ಗ್ರಾಮೀಣ ಅಭಿವೃದ್ಧಿ ಕಾರ್ಯಗಳು ಸಮಾಜದ ದುರ್ಬಲವರ್ಗವನ್ನು ರಕ್ಷಿಸಬೇಕೆಂಬುದರ ಬಗ್ಗೆ ವಾಮರಂಗ ಸರ್ಕಾರ ದೃಢ ನಿಲುವು ತಳೆದಿದೆ. ಅತಿಬಡತನದಲ್ಲಿರುವ ವರ್ಗದ ಜೀವನಮಟ್ಟವನ್ನು ಏರಿಸುವ ಪ್ರಯತ್ನಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶಗಳ ಸ್ಥಗಿತ ಸ್ಥಿತಿಯನ್ನು ನಿವಾರಿಸಲು ನಮ್ಮ ಸರ್ಕಾರ ಯತ್ನಿಸುತ್ತಿದೆ. ಅಭಿವೃದ್ಧಿ ಕಾರ್ಯಗಳ ಫಲವು ದುರ್ಬಲವರ್ಗಗಳಿಗೆ ಮುಟ್ಟಬೇಕಾದರೆ ಜನತೆ ಭಾಗವಹಿಸುವುದೊಂದೇ ಸರಿಯಾದ ದಾರಿ.

ತ್ರಿಪುರವನ್ನು ಬಿಟ್ಟರೆ ದೇಶದಲ್ಲೆಲ್ಲೂ ಇಲ್ಲದ ವ್ಯವಸ್ಥೆ ನಮ್ಮಲ್ಲಿದೆ. ಸಾವಿರಾರು ಪಂಚಾಯತಿಗಳು 1978ರಲ್ಲಿ ಚುನಾಯಿತವಾಗಿ ಗ್ರಾಮೀಣ ಅಭಿವೃದ್ಧಿಯ ವಾಹಕಗಳಾಗಿವೆ. ಇವು ಅನೇಕ ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಿವೆ. ಯೋಜನೆಗಳನ್ನು ರೂಪಿಸುವ ಅಧಿಕಾರ ಪಂಚಾಯತಿಗಳಿಗಿದೆ. ಕೋಟಿಗಟ್ಟಲೆ ಹಣವನ್ನು ಆ ಯೋಜನೆಗಳಿಗೆ ಒದಗಿಸಲಾಗುತ್ತಿದೆ. ಬೂರ್ಜ್ವಾ-ಭೂಮಾಲೀಕ ಪಕ್ಷಗಳು "ವಿಕೇಂದ್ರೀಕರಣ"ದ ಬಗ್ಗೆ ಬರೀ ಮಾತನಾಡುತ್ತಿವೆ. ಆದರೆ ನಮ್ಮ ಸರ್ಕಾರ ವಿಕೇಂದ್ರೀಕರಣವನ್ನು ಸಾಧಿಸಿ ತೋರಿಸುತ್ತಿದೆ. ಪಂಚಾಯತಿಗಳು ಜನತೆಯ ಸಂಸ್ಥೆಗಳು. ಗ್ರಾಮೀಣ ಜನತೆ ಮತ್ತು ಆಡಳಿತ ನಡುವಿನ ಮುಖ್ಯ ಸಂಪರ್ಕ ಇವೇ. "ಕೆಲಸಕ್ಕಾಗಿ ಕಾಳು" ಯೋಜನೆಯಿಂದ ಗ್ರಾಮೀಣ ಜನರ ಅರೆಉದ್ಯೋಗ ಸಾಕಷ್ಟು ಕಡಿಮೆಯಾಗಿದೆ. ಗೇಣಿದಾರರ, ಸಣ್ಣ ಮತ್ತು ಮಧ್ಯಮ ರೈತರ ಹಿತಾಸಕ್ತಿಗಳನ್ನು ಅನೇಕ ಶಾಸನ ಕ್ರಮಗಳ ಮೂಲಕ ರಕ್ಷಿಸಲಾಗುತ್ತಿದೆ.

ಕೈಗಾರಿಕಾ ರಂಗದ ಸ್ಥಗಿತ ಸ್ಥಿತಿಯನ್ನು ನಿವಾರಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ನಮ್ಮ ಪ್ರಯತ್ನಗಳಿಂದ ಅನೇಕ ಕೈಗಾರಿಕೆಗಳನ್ನು ಕೇಂದ್ರಸರ್ಕಾರ ವಶಕ್ಕೆ ತೆಗೆದುಕೊಂಡಿದೆ. ಮುಚ್ಚಿದ ಕಾರ್ಖಾನೆಗಳಿಂದ ನಿರುದ್ಯೋಗಿಗಳಾಗಿದ್ದ 40,000 ಜನರು ಈಗ ಮತ್ತೆ ಉದ್ಯೋಗ ಪಡೆದಿದ್ದಾರೆ ಆದರೆ ಕೆಲವು ಮುಖ್ಯ ಕೈಗಾರಿಕೆಗಳೆಲ್ಲ ಕೇಂದ್ರದ ಪಟ್ಟಿಯಲ್ಲಿರುವುದರಿಂದ ಕೈಗಾರಿಕಾಕ್ಷೇತ್ರದ ಸ್ಥಗಿತ ಸ್ಥಿತಿಯನ್ನು ಹೋಗಲಾಡಿಸುವುದು ಅದರ ಕೈಯಲ್ಲೇ ಇದೆ.

ವಾಮರಂಗ ಸರ್ಕಾರದ ಜನಪರ ನೀತಿಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರದ ಶೇ. 80ಕ್ಕೂ ಹೆಚ್ಚು ಉದ್ಯೋಗಿಗಳು ಶ್ರದ್ಧೆಯಿಂದ ಶ್ರಮಿಸುತ್ತಿದ್ದಾರೆ. ಅವರ ಸಂಘಗಳಿಗೆ ನಾವು ಮಾನ್ಯತೆ ನೀಡಿದ್ದೇವೆ. ಈ ಉದ್ಯೋಗಿಗಳಿಗೆ ಟ್ರೇಡ್‌ಯೂನಿಯನ್ ಹಕ್ಕು, ಮುಷ್ಕರದ ಹಕ್ಕನ್ನು ನಾವು ಕೊಟ್ಟಿದ್ದೇವೆ. ಇದು ಭಾರತದಲ್ಲೇ ಪ್ರಥಮವಾದ ಚಾರಿತ್ರಿಕ ನಿರ್ಣಯ.

ರಾಜ್ಯದ ಪೋಲೀಸರೂ ಸಂಘ ರಚಿಸಿಕೊಳ್ಳಲು ನಮ್ಮ ಸರ್ಕಾರ ಅನುಮತಿ ನೀಡಿದೆ. ನಾವು ಅವರ ಸುಖದುಃಖಗಳನ್ನು ಸದಾ ವಿಚಾರಿಸುತ್ತಿದ್ದೇವೆ. ಆದ್ದರಿಂದಲೇ ಇತರ ರಾಜ್ಯಗಳಲ್ಲಿ ಇದ್ದ ಹಾಗೆ ನಮ್ಮಲ್ಲಿ ಪೋಲೀಸ್ ಆಂದೋಲನ ಇಲ್ಲ.

ಶಾಲಾ ಅಧ್ಯಾಪಕರು, ಕಾಲೇಜು ಅಧ್ಯಾಪಕರು, ವಿದ್ಯಾರ್ಥಿಗಳು, ಮಹಿಳೆಯರು, ಸಾಂಸ್ಕೃತಿಕ ಕಾರ್ಯಕರ್ತರು ಮುಂತಾದವರ ಸಾಮೂಹಿಕ ಸಂಘಟನೆಗಳ ಜೊತೆ ನಾವು ಸಂಪರ್ಕ ಸಾಧಿಸಿದ್ದೇವೆ. ಹಿಂದುಳಿದ ಸಂಸ್ಕೃತಿಯ ವಿರುದ್ಧ ನಾವು ಸಮರ ಹೂಡಿದ್ದೇವೆ. ಚಲನ ಚಿತ್ರಗಳು, ಪುಸ್ತಕ ಪ್ರಕಟಣೆ, ನಾಟಕ ಇತ್ಯಾದಿಗಳಲ್ಲಿ ಪ್ರಗತಿಶೀಲ ಮತ್ತು ಆರೋಗ್ಯಕರ ವಾತಾವರಣ ಮೂಡಿಸಲು ನಾವು ಪ್ರಯತ್ನಿಸುತ್ತಿದ್ದೇವೆ.

ಕಾನೂನು ಮತ್ತು ಶಿಸ್ತು ನಮ್ಮ ರಾಜ್ಯದಲ್ಲಿ ಸಮಾಧಾನಕರವಾಗಿದೆ. ಹರಿಜನರ ಮೇಲೆ ಹಲ್ಲೆ, ಅಲ್ಪಸಂಖ್ಯಾತ ಕೋಮುಗಳ ಮೇಲೆ ಹಲ್ಲೆ ನಮ್ಮಲ್ಲಿ ನಡೆದಿಲ್ಲ. ಆದರೆ ಜನತೆಯ ಶತ್ರುಗಳು ಸುಮ್ಮನೆ ಕೂಡುವುದಿಲ್ಲ. ಶಾಂತವಾತಾವರಣವನ್ನು ಕದಡಲು ಅವರು ಸಾಧ್ಯವಾದಷ್ಟೂ ಪಿತೂರಿ ನಡೆಸುತ್ತಾರೆ. ಆದರೆ ಜನತೆ ಎಚ್ಚೆತ್ತಿರಬೇಕು. ಶತ್ರುಗಳು ನಡೆಸುವ ಕೆಟ್ಟ ಯೋಜನೆಗಳನ್ನು ಉರುಳಿಸಲು ಅವರು ಸಾವಿರಗಟ್ಟಲೆ ಸಂಘಟಿತರಾಗಬೇಕು. ಕೊನೆಗೆ ಜಯ ಅವರದೇ ಆಗುತ್ತದೆ.

ಹೋರಾಡುತ್ತಿರುವ ಕಾರ್ಮಿಕರಿಗೆ ಧಾನ್ಯ ಸಂಗ್ರಹ

ಬೆಂಗಳೂರು ನಗರದ ಐ.ಟಿ.ಸಿ. ಕಾರ್ಖಾನೆಯಲ್ಲಿ 108 ದಿನಗಳಿಂದ ದಿಟ್ಟತನದಿಂದ ಹೋರಾಡುತ್ತಿರುವ ಕಾರ್ಮಿಕರಿಗೆ ಬೆಂಬಲ ಸೂಚಿಸಲು ಫೆಡರ್‌ಲೈಟ್ ಕಾರ್ಪೊರೇಷನ್ ಕಾರ್ಮಿಕರು ತೀರ್ಮಾನಿಸಿದ್ದಾರೆ. ಕಾರ್ಯಕಾರಿ ಸಮಿತಿಯ ಸಭೆಯು ಕಾಂ. ಎಸ್. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದು, ಕಳೆದ ಒಂದು ತಿಂಗಳಿಂದ ಹೋರಾಡುತ್ತಿರುವ ಮೆಟಲ್ ಲ್ಯಾಂಪ್ಸ್ ಕಾರ್ಮಿಕರಿಗೆ ಧಾನ್ಯ ಸಂಗ್ರಹಿಸಿ ಕೊಡಲು ನಿರ್ಧರಿಸಿತು. ಮ್ಯಾಗ್ನಿಷಿಯಂ ಪ್ರಾಡಕ್ಟ್ಸ್‌ನ ಹೋರಾಡುತ್ತಿರುವ ಕಾರ್ಮಿಕರಿಗೆ ಬೆಂಬಲ ನೀಡಲು ಫೆಡರ್‌ಲೈಟ್ ಕಾರ್ಮಿಕರು ತಮ್ಮ ಸಂಘದಿಂದ 50-00 ರೂ. ನೀಡಲು ತೀರ್ಮಾನಿಸಿದರು. ಸಂಸೆ ಟೀ ತೋಟದ ಕಾರ್ಮಿಕರಿಗೂ 50-00ರೂ. ನೀಡಲಾಗುತ್ತದೆ.

ಅಕ್ರಮ ಲಾಕ್‌ಔಟ್, ಪೋಲೀಸ್ ದಬ್ಬಾಳಿಕೆಗಳನ್ನು ಸಭೆಯಲ್ಲಿ ಖಂಡಿಸಲಾಯಿತು. ಏರುತ್ತಿರುವ ಬೆಲೆಗಳಿಗನುಗುಣವಾಗಿ ವೇತನ ಮತ್ತು ತುಟ್ಟಿಭತ್ಯಗಳನ್ನು ಪುನರ್ವಿಮರ್ಶಿಸುವಂತೆ ಫೆಡರ್‌ಲೈಟ್ ಮಾಲೀಕರನ್ನು ಒತ್ತಾಯಿಸಲಾಗಿದೆ. ಆ ಬಗ್ಗೆ 8-7-80 ರಂದು ಸರ್ವಸದಸ್ಯರ ಸಭೆ ನಡೆಸಲು ತೀರ್ಮಾನಿಸಲಾಗಿದೆ.

ಸುಮಾರು 700 ಮಹಿಳೆಯರು ಕೆಲಸ ಮಾಡುತ್ತಿದ್ದ ಸುಧಾ ಆಂಡ್ ಕಂಪನಿಯನ್ನು ಅಕ್ರಮವಾಗಿ ಮುಚ್ಚಿರುವುದನ್ನು ಸಭೆ ಖಂಡಿಸಿತು. ಕಂಪನಿಯನ್ನು ಮತ್ತೆ ತೆರೆಯಬೇಕೆಂದು ಮಾಲೀಕರನ್ನು ಮತ್ತು ಸರ್ಕಾರವನ್ನು ಒತ್ತಾಯಿಸಲಾಗಿದೆ.

ಅಂಚೆ ನೌಕರನ ಮೇಲೆ ಪೋಲೀಸ್ ದೌರ್ಜನ್ಯ

ಹಾವೇರಿಯ ಹೆಡ್ ಪೋಸ್ಟ್ ಆಫೀಸಿನ ಉದ್ಯೋಗಿ ಬಿ. ಜಿ. ಸವನೂರ ಅವರ ಮೇಲೆ ಪೋಲೀಸರು ವಿನಾಕಾರಣ ದೌರ್ಜನ್ಯ ನಡೆಸಿದ್ದಾರೆ. ರಾತ್ರಿವೇಳೆ ಕೆಲಸದ ಮೇಲಿದ್ದ ಅವರು ಪರವೂರಿನ ದೂರವಾಣಿ ಕರೆಯನ್ನು ಮತ್ತೊಬ್ಬರಿಗೆ ತಿಳಿಸಲು ಹೋಗಿ ಬರುವಾಗ ಈ ಅಮಾನುಷ ಕೃತ್ಯ ನಡೆದಿದೆ. ಗುರುತಿನ ಬಿಲ್ಲೆ ತೋರಿಸಿದರೂ ಪೋಲೀಸರು ಹೊಡೆದಿದ್ದಾರೆ.

ತಮ್ಮ ಶಾಖೆಯ ನೌಕರನ ಮೇಲೆ ನಡೆದ ಈ ಹಲ್ಲೆಯನ್ನು ಖಂಡಿಸಿ, ಹಾವೇರಿ ಅಂಚೆತಂತಿ ಮತ್ತು ದೂರವಾಣಿ ಎಕ್ಸ್‌ಚೇಂಜ್ ಉದ್ಯೋಗಿಗಳು ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಪೋಲೀಸರ ವಿರುದ್ಧ ಘೋಷಣೆ ಕೂಗಲಾಯಿತು.

ಶಿವಮೊಗ್ಗದಲ್ಲಿ ಯುವಜನ ಸಂಘಟನಾ ಸಭೆ

ಶಿವಮೊಗ್ಗ ನಗರ ಯುವಜನರ ಸಭೆ ತಾ. 25-6-80 ರಂದು ನಡೆದು "ಪ್ರಜಾಸತ್ತಾತ್ಮಕ ಯುವಜನ ಸಂಘಟನಾ" ಶಾಖೆಗಳನ್ನು ರಚಿಸಲಾಯಿತು.

ಸೀಗೆಹಟ್ಟಿ ಸಮಿತಿಗೆ ಕಾಂ. ಶಿವಶಂಕರ್ ಸಂಚಾಲಕರನ್ನಾಗಿಯೂ, ಸಾವರ್‌ಕರ್‌ನಗರ ಸಮಿತಿಗೆ ಕಾಂ. ಬಿ. ತಿರುಕಪ್ಪ, ಅಡ್ವೊಕೇಟ್ ಅವರನ್ನು ಸಂಚಾಲಕರನ್ನಾಗಿಯೂ, ಜತೆ ಸಂಚಾಲಕರನ್ನಾಗಿ ಕಾಂ. ಡಿ. ಗಣೇಶಪ್ಪ ಇವರನ್ನು ನೇಮಿಸಲಾಗಿದೆ. ದುರ್ಗಿಗುಡಿ ಸಮಿತಿಗೆ ಕಾಂ. ಡಾ|| ಕೃಷ್ಣಾಜಿ ಸಂಚಾಲಕರನ್ನಾಗಿ, ಜತೆ ಸಂಚಾಲಕರು ಕಾಂ. ಬಿ. ಬಸವರಾಜ್ ಅವರುಗಳನ್ನು, ದೊಡ್ಡಪೇಟೆ ಸಮಿತಿಗೆ ಕಾಂ ಮೇಘರಾಜ್ ಹಾಗೂ ವಿದ್ಯಾನಗರ ಸಮಿತಿಗೆ ಕಾಂ. ಕೆ.ಎಲ್.ಎನ್. ರಾವ್ ಇವರುಗಳನ್ನು ಸಂಚಾಲಕರುಗಳನ್ನಾಗಿ ನೇಮಿಸಲಾಗಿದೆ.

ಕಾಂ. ಬಿ. ತಿರುಕಪ್ಪ, ಬಿ.ಎ., ಎಲ್.ಎಲ್.ಬಿ., ಅಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಯುವಜನರ ಸಭೆಯನ್ನುದ್ದೇಶಿಸಿ ಹಲವು ಯುವಕರುಗಳು ಸಂಘಟನೆಯ ಹಾಗೂ ಪ್ರಸ್ತುತ ಪರಿಸ್ಥಿತಿಯಲ್ಲಿ ಒಂದು ಪ್ರಜಾಸತ್ತಾತ್ಮಕ ಎಡಶಕ್ತಿಗೆ ಬೆಂಬಲ ನೀಡಲು ಒಮ್ಮತದಿಂದ ತೀರ್ಮಾನ ಕೈಗೊಳ್ಳಲು ಯುವಕರು ಮುಂದಾಗಬೇಕೆಂದರು.

ಶಿವಮೊಗ್ಗ ಜಿಲ್ಲಾ ಸಂಚಾಲಕ ಕಾಂ. ಆರ್. ಗೋಪಾಲ್‌ನಾಯಕ್ ಈ ಸಭೆಯಲ್ಲಿ ಉಪಸ್ಥಿತರಿದ್ದರು. ○

ಕೋಣೆಯಲ್ಲಿ ಕೃಷಿಕಾರ್ಮಿಕರ ಗೆಲವು

ದ. ಕ. ಜಿಲ್ಲೆ ಕುಂದಾಪುರ ತಾಲ್ಲೂಕು ಕೋಣೆಗ್ರಾಮದ ಕೃಷಿ ಕಾರ್ಮಿಕರು ಹೆಚ್ಚು ವೇತನಕ್ಕಾಗಿ ಹೋರಾಟ ನಡೆಸಿ ಗೆಲುವು ಪಡೆದಿದ್ದಾರೆ. ಈಗ ಕೂಲಿಯಾಗಿ ಅರ್ಧ ಸೇರು ಅಕ್ಕಿಹೆಚ್ಚು ಪಡೆಯುತ್ತಿದ್ದಾರೆ ಎಂದು ಕೃಷಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಶ್ರೀಮತಿ ಡಾಪ್ನಿನ್ ಕರವಲ್ ಹೇಳಿದ್ದಾರೆ. ಕೋಣೆ ಯುವಜನ ಸಂಘಟನೆಯೂ ಈ ಹೋರಾಟವನ್ನು ಬೆಂಬಲಿಸಿತ್ತು. ●

ಗಿರಣಿ ಕಾರ್ಮಿಕರ ಮುಷ್ಕರ ಮುಕ್ತಾಯ

ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಯ ಕಾರ್ಮಿಕರು 64 ದಿವಸಗಳಿಂದ ಹೋರಾಟ ನಡೆಸುತಿದ್ದು, ಐವರು ಕಾರ್ಮಿಕರು 14 ದಿವಸಗಳಿಂದ ಆಮರಣ ಉಪವಾಸ ಮಾಡುತ್ತಿದ್ದರು. ಈಗ ಹೋರಾಟ ಯಶಸ್ವಿಯಾಗಿ ಕಾರ್ಮಿಕರು ತಿಂಗಳಿಗೂ 30 ರೂ. ಹೆಚ್ಚು ವೇತನ ಪಡೆಯಲಿದ್ದಾರೆ. ವಜಾ ಆದ ಕಾರ್ಮಿಕರ ವಾಪಸ್ಸು, ಅವರ ಮೇಲಿನ ಖಟ್ಲೆಗಳ ರದ್ದು, 100ರೂ. ವೇತನ ಮುಂಗಡ ಮುಂತಾದ ಬೇಡಿಕೆಗಳೂ ಈಡೇರಿವೆ. ಈ ಬಗ್ಗೆ ಒಪ್ಪಂದವನ್ನು ಜಾಯಿಂಟ್ ಲೇಬರ್ ಕಮೀಷನರ ಮುಂದೆ ನಡೆಸಲಾಯಿತು. ಸಂಘದ ಅಧ್ಯಕ್ಷ ಎಲ್. ಡಿ. ಲವಾಡಿ, ಕಾರ್ಯದರ್ಶಿ ಎಚ್. ವಿ. ಚಕಡಿ, ಸಿ. ಐ. ಟಿ. ಯು. ಪರವಾಗಿ ಎನ್. ಕೆ. ಉಪಾಧ್ಯಾಯ ಮತ್ತು ಡಿ. ಎಂ. ಖಲಾಸಿಯು ಚರ್ಚೆಯಲ್ಲಿ ಭಾಗವಹಿಸಿದ್ದರು. ಸುದೀರ್ಘ ಹೋರಾಟ ಯಶಸ್ವಿಯಾದುದರಿಂದ ಕಾರ್ಮಿಕರಲ್ಲಿ ಹೊಸ ಉತ್ಸಾಹ ಮೂಡಿದೆ. ○

ತಾತಗುಣಿ ಹೋರಾಟ ಹೊಸ ಬೆಳವಣಿಗೆ

ಕಳೆದ ಒಂದು ವರ್ಷದಿಂದಲೂ ನಡೆಯುತ್ತಲಿದ್ದ ತಾತಗುಣಿ ಎಸ್ಟೇಟ್‌ನ ಹರಿಜನ ಕಾರ್ಮಿಕರ ಹೋರಾಟಕ್ಕೆ ಹೊಸದೊಂದು ಬೆಳವಣಿಗೆಯಾಗಿದೆ. ದೇವಿಕಾರಾಣಿ ಮತ್ತು ರೋರಿಚ್ ಮಾಲೀಕತ್ವದ ತಾತಗುಣಿ ಎಸ್ಟೇಟಿನ ಆಡಳಿತವರ್ಗ ಮತ್ತು ಅಲ್ಲಿನ ಹರಿಜನ ಕೂಲಿಗಾರರ ನಡುವೆ ಇರುವ ವಿವಾದವನ್ನು ಸರ್ಕಾರವು ನ್ಯಾಯಾಲಯಕ್ಕೆ ಒಪ್ಪಿಸಿದೆ.

ವಿವಾದ ನ್ಯಾಯಾಲಯದ ಮುಂದೆ ಹೋದುದರಿಂದ ಮುಷ್ಕರ ನಿರತ ಕಾರ್ಮಿಕರು ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡು ಕೆಲಸಕ್ಕೆ ಹಾಜರಾಗಲು ಹೋದರೆಂದೂ, ಮರಳಿ ಕೆಲಸಕ್ಕೆ ಹಾಜರಾಗಬಯಸಿದ ಕಾರ್ಮಿಕರನ್ನು ನ್ಯಾಯಾಲಯದ ತೀರ್ಪು ಬರುವವರೆಗೆ ಕೆಲಸಕ್ಕೆ ತೆಗೆದುಕೊಳ್ಳಲು ಮಾಲೀಕರು ನಿರಾಕರಿಸಿದರೆಂದು ಸಂಘದ ನಾಯಕ ಜಗನ್ನಾಥ್ ಹೇಳಿದ್ದಾರೆ. ಇದೇ ಮಾತನ್ನು ಲಿಖಿತವಾಗಿ ಕೊಡಬೇಕೆಂದು ಕಾರ್ಮಿಕ ಸಂಘದವರು ಕೇಳಿದಾಗ; ತಾವು ಕೆಲಸಕ್ಕೆ ಮರಳಿ ಹಾಜರಾಗುತ್ತಿದ್ದೇವೆ ಎಂಬುದನ್ನು ಕೆಲಸಗಾರರು ಲಿಖಿತ ರೂಪದಲ್ಲಿ ಕೇಳಿದರೆಂದೂ ಕಾರ್ಮಿಕರು ಬರವಣಿಗೆಯಲ್ಲಿ ಕೊಟ್ಟ ಮೇಲೂ ಮಾಲೀಕರು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಅಕ್ರಮ ಲಾಕೌಟ್ ಘೋಷಿಸಿದ್ದಾರೆಂದು ಜಗನ್ನಾಥ್ ವಿವರಿಸಿದ್ದಾರೆ.

ಅಕ್ರಮ ಲಾಕೌಟ್ ತೆಗೆಯಬೇಕೆಂದು ಮತ್ತೆ ಕಾರ್ಮಿಕರು ಲೇಬರ್ ಅಧಿಕಾರಿಗಳನ್ನು, ಆಡಳಿತ ವರ್ಗವನ್ನು ಒತ್ತಾಯಿಸಿ ಹೊಸ ಹೋರಾಟ ಆರಂಭಿಸಿದ್ದಾರೆ. ●

ಅಗತ್ಯ ಸೇವಾ ಮಸೂದೆಗೆ ನೇಕಾರರ ವಿರೋಧ

ದ.ಕ. ಜಿಲ್ಲಾ ವೀವರ್ಸ್ ಯೂನಿಯನ್‌ನ ವಾರ್ಷಿಕ ಮಹಾಸಭೆಯು 16-6-80 ರಂದು ನಡೆದು, ಅದರ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಾಂ. ಕೆ. ತಿಮ್ಮಪ್ಪ ಅವರು ವಹಿಸಿದ್ದರು. ಸಂಘದ ವರದಿಯನ್ನು ಕಾಂ. ಕೆ. ಪಿ. ಸಾಲಿಯಾನ್ ಒಪ್ಪಿಸಿದ ನಂತರ ಖಜಾಂಚಿ ಕಾಂ. ಮಾರಪ್ಪ ಲೆಕ್ಕಪತ್ರ ಮಂಡಿಸಿದರು.

ಅಗತ್ಯಸೇವಾ ಮಸೂದೆಯನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕೆಂದು ಸಭೆಯು ಸರ್ಕಾರಕ್ಕೆ ಒತ್ತಾಯಿಸಿತು. ಗಡೀಪಾರು ಕ್ರಮವನ್ನು ಸಭೆ ಖಂಡಿಸಿತು.

ನೇಯ್ಗೆ ಕೈಮಗ್ಗಕ್ಕೆ ಸರ್ಕಾರವು ಕಡಿಮೆ ದರದಲ್ಲಿ ನೂಲು, ರಂಗು ಒದಗಿಸಬೇಕೆಂದು ಒತ್ತಾಯಿಸಲಾಯಿತು. ಸಭೆಯನ್ನು ಉದ್ದೇಶಿಸಿ ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಮಾತನಾಡಿದರು. ○

ತೀರ್ಥಹಳ್ಳಿಯಲ್ಲಿ ಯುವಜನ ಸಂಘಟನಾ ಸಭೆ

ತೀರ್ಥಹಳ್ಳಿಯ ಯುವಜನ ಸಂಘಟನೆಯ ಸಭೆಯು ದಿ. 15-6-80 ರಂದು ಸಭೆ ಸೇರಿ ಅಲ್ಲಿ ಯುವಜನ ಸಂಘಟನಾ ಶಾಖೆಗಳನ್ನು ರಚಿಸಲಾಗಿದೆ.

ತೀರ್ಥಹಳ್ಳಿ ಎ. ಪಿ. ರೋಡ್ ಶಾಖೆಗೆ ಸಂಚಾಲಕರು ಕಾಂ. ಸಿರಾಜಿನ್ ಭಾಷಾ; ಸೊಪ್ಪುಗುಡ್ಡೆ ಶಾಖೆಗೆ ಸಂಚಾಲಕರು ಕಾಂ. ಸುಲೇಮಾನ್ ಸಾಬ್; ಶಂಕರ ಹೊಳೆ ಶಾಖೆಗೆ ಸಂಚಾಲಕರು ಕಾಂ. ಲಿಂಗಪ್ಪ, ಜತೆ ಸಂಚಾಲಕರು ಕಾಂ. ಸದಾನಂದ್ ಹಾಗೂ ಕುಡುಮಲ್ಲಿಗೆ ಶಾಖೆಗೆ ಕಾಂ ಅಣ್ಣಪ್ಪ ಸಂಚಾಲಕರುಗಳನ್ನಾಗಿ ನೇಮಿಸಲಾಯಿತು.

ಯುವಜನ ಸಂಘಟನೆಯ ಬಗೆಗೆ ರಾಯಚೂರು ಸಮಾವೇಶಕ್ಕೆ ತೀರ್ಥಹಳ್ಳಿ ಪ್ರತಿನಿಧಿಯಾಗಿ ಆಗಮಿಸಿದ್ದ ಕಾಂ. ಶ್ರೀಧರ್ ಅವರು ವಿವರಣೆ ನೀಡಿದರು. ಸಭೆಯಲ್ಲಿ ಶಿವಮೊಗ್ಗ ಜಿಲ್ಲಾ ಸಂಚಾಲಕ ಕಾಂ. ಆರ್. ಗೋಪಾಲ ನಾಯಕ್ ಹಾಜರಿದ್ದು, ರಾಯಚೂರಿನಲ್ಲಿ ನಡೆದ ಸಮಾವೇಶದ ವರದಿ ಒಪ್ಪಿಸಿದರು. ●

ಕಾಂಟ್ರಾಕ್ಟ್ ರದ್ದಿಗೆ ಬೀಡಿಕಾರ್ಮಿಕರ ಒತ್ತಾಯ

ದ.ಕ. ಜಿಲ್ಲೆಯ ಜಪ್ಪಿನಮೊಗ್ರುವಿನಲ್ಲಿ ಅಳಪೆ ಪ್ರದೇಶ ಬೀಡಿ ಯೂನಿಯನ್ನಿನ 8ನೇ ವಾರ್ಷಿಕ ಮಹಾಸಭೆಯು 29-6-80ರಂದು ಸೇರಿತ್ತು. ಸರ್ಕಾರವು ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದುಮಾಡಿ ಕಾರ್ಮಿಕರ ಶೋಷಣೆಯನ್ನು ತಪ್ಪಿಸಬೇಕೆಂದು ಒತ್ತಾಯಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪೂವಪ್ಪ ಸಾಲಿಯಾನ್ ವಹಿಸಿದ್ದರು.

ದ.ಕ. ಜಿಲ್ಲೆ ಸಿ ಐ ಟಿ.ಯು. ಉಪಾಧ್ಯಕ್ಷ ಕಾಂ. ಬಿ. ಮಾಧವ, ಜಂಟಿ ಕಾರ್ಯದರ್ಶಿ ಕಾಂ. ಎಂ.ಬಿ. ಲೋಕಯ್ಯ, ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್, ಜಪ್ಪಿನಮೊಗ್ರು ಪಂಚಾಯತಿ ಅಧ್ಯಕ್ಷ ಕಾಂ. ಜೆ. ಸದಾಶಿವ ಶೆಟ್ಟಿ ಸಭೆಯಲ್ಲಿ ಮಾತನಾಡಿದರು. ಅಗತ್ಯಸೇವಾ ಮಸೂದೆ, ಕಾರ್ಮಿಕ ನಾಯಕರ ಗಡೀಪಾರು ಇವುಗಳನ್ನು ಸಭೆಯಲ್ಲಿ ಖಂಡಿಸಲಾಯಿತು. 1980-81ರ ಹೊಸ ಸಮಿತಿಯನ್ನು ಚುನಾಯಿಸಲಾಯಿತು. ○

ಯುವಜನರ ಸಂಘಟನಾ ಸದಸ್ಯರ ಸಭೆ

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ (ಡಿ. ವೈ. ಒ) ಬೆಂಗಳೂರು ಜಿಲ್ಲಾ ಸಮಿತಿಯು 6-7-80ರ ಭಾನುವಾರ ಸಭೆ ಸೇರಿ, ತನ್ನ ಸಂಘಟನಾ ಸದಸ್ಯರನ್ನು ಆರಿಸಿ ಒಂದು ಸಮಿತಿಯನ್ನು ರಚಿಸಿತು.

ಸಂಘಟನಾ ಸಮಿತಿಯಲ್ಲಿ ಹದಿಮೂರು ಮಂದಿ ಸದಸ್ಯರನ್ನು ಆರಿಸಲಾಗಿದೆ. ಜಿಲ್ಲಾ ಸಮಿತಿಯ ಸಂಚಾಲಕ ಕಾಂ. ವೆಂಕಟನಾಗನ್‌ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಂಘಟನಾ ಸಭೆಯಲ್ಲಿ, ಯುವಜನತೆಯನ್ನು ಕಾಡುತ್ತಿರುವ ನಿರುದ್ಯೋಗ, ಕೆಲಸಕ್ಕಾಗಿ ವಿವಿಧ ಮಾರ್ಗಗಳನ್ನು ಅನುಸರಿಸುತ್ತಿರುವ ಯುವಜನತೆಯ ಹಾಗೂ ಇನ್ನಿತರ ಜೀವಂತ ಸಮಸ್ಯೆಗಳ ಬಗ್ಗೆ ಸಭೆ ಕೂಲಂಕಷವಾಗಿ ಚರ್ಚಿಸಿ, ತಾನು ತುರ್ತಾಗಿ ಸಂಘಟಿಸಬೇಕಾಗಿರುವ ಅಗತ್ಯತೆಯನ್ನು ಗುರುತಿಸಿ ಸಂಘಟನಾ ಸದಸ್ಯರಿಗೆ ಆ ಜವಾಬುದಾರಿಕೆಯನ್ನು ನೀಡಿತು.

ಕರ್ನಾಟಕ ರಾಜ್ಯ ಸಂಚಾಲಕ ಕಾಂ ಶ್ರೀರಾಮರೆಡ್ಡಿಯವರು, ಯುವಜನರ ಜವಾಬ್ದಾರಿಕೆ, ಅವರ ವಿವಿಧ ದೇಶಗಳ ಹೋರಾಟಗಳ ಚರಿತ್ರೆ, ಎಂಬಿತ್ಯಾದಿ ವಿವರಗಳನ್ನು ಸಭೆಗೆ ನೀಡಿದರು. ●

ಬಂಟ್ವಾಳ ಬೀಡಿ ಕಾರ್ಮಿಕರ ಸಭೆ

ದ.ಕ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು 29-6-80 ರಂದು ಜರುಗಿತು. ಇದರ ಅಧ್ಯಕ್ಷತೆಯನ್ನು ಕಾಂ. ಬಿ. ಎಚ್. ಬಂಗೇರ ಅವರು ವಹಿಸಿದ್ದರು. ಕಾರ್ಮಿಕರು ರಾಜಕೀಯದಲ್ಲಿ ಮುಖ್ಯಪಾತ್ರವಹಿಸಿ ಸಂಘಟಿತರಾಗಿ ಹೋರಾಡಬೇಕೆಂದು ದ. ಕ. ಜಿಲ್ಲೆ ಪಕ್ಷದ ಕಾರ್ಯದರ್ಶಿ ಕಾಂ. ಕೆ ಆರ್. ಶ್ರೀಯಾನ್ ಕರೆಕೊಟ್ಟರು. ಬೀಡಿ ಕಾರ್ಮಿಕ ಮುಂದಾಳು ಕಾಂ. ಬಿ. ವಾಮಗಟ್ಟಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನೂತನ ಸಮಿತಿಯ ಪದಾಧಿಕಾರಿಗಳ ಆಯ್ಕೆ ನಡೆಯಿತು. ಕಾರ್ಮಿಕ ನಾಯಕರ ಗಡೀಪಾರಿನ ದುಷ್ಟ ನಿರ್ಧಾರ, ಅಗತ್ಯಸೇವಾ ಕರಿಕಾಯಿದೆಗಳನ್ನು ಸಭೆಯಲ್ಲಿ ಖಂಡಿಸಲಾಯಿತು. ಬೀಡಿ ಕಾರ್ಮಿಕರಿಗೆ ಕನಿಷ್ಠಕೂಲಿ ನಿರ್ಣಯದ ಜಾರಿ, ಶೇ. 20ರ ಬೋನಸ್, ಭವಿಷ್ಯನಿಧಿ ವಂತಿಗೆಯ ರಶೀತಿ, ಕಾಂಟ್ರಾಕ್ಟ್ ಪದ್ಧತಿಯ ರದ್ದು ಇವುಗಳನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ○

ಕೋಲಾರದಲ್ಲಿ ನೌಕರರ ಬೃಹತ್ ಮೆರವಣಿಗೆ

ನಾಲ್ಕನೇ ದರ್ಜೆ ನೌಕರರ 25 ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರ ತೋರುತ್ತಿರುವ ಉದಾಸೀನತೆಯನ್ನು ಪ್ರತಿಭಟಿಸಲು 28-6-80ರಂದು ಸಾವಿರಾರು ನೌಕರರು ಕೋಲಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಸಿ.ಐ.ಟಿ.ಯು.ಗೆ ಸೇರಿದ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಇದನ್ನು ಬೆಂಬಲಿಸಿತ್ತು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ನೌಕರರ ಸಂಘದ ಅಧ್ಯಕ್ಷ ಕೆ. ರಾಮಯ್ಯ ಅವರು ವಹಿಸಿದರು. ಕಾರ್ಮಿಕ ಮುಖಂಡರಾದ ಕಾಂ. ಜೆ. ದೊರೆಸ್ವಾಮಿ, ಕಾಂ. ಎನ್. ಮಣಿ ಮತ್ತು ಪತ್ರಿಕಾ ಸಂಪಾದಕ ಶ್ರೀ ಎಸ್. ಅಯ್ಯರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಸಂಘದ ಕರೆಯ ಮೇರೆಗೆ 3-7-80 ರಿಂದ ತಾಲ್ಲೂಕು ಕಛೇರಿಯ ಮುಂದೆ "ಧರಣಿ ಸತ್ಯಾಗ್ರಹ" ನಡೆಸಲು ತೀರ್ಮಾನಿಸಲಾಯಿತು. ○

ಸಂಜಯಗಾಂಧಿ ದುರ್ಮರಣ

(3ನೇ ಪುಟದಿಂದ)

ಡಿ.ಜಿ.ಸಿ.ಎ. ಯು ಎತ್ತಿದ ಲಿಖಿತ ತಕರಾರಿನ ಮೇರೆಗೆ ಸಂಜಯಗಾಂಧಿಯ ವಿಮಾನ ಹಾರಾಟದ ಲೈಸನ್ಸ್ ರದ್ದುಗೊಳಿಸುವುದನ್ನು ಬಿಟ್ಟು ಮುಖ್ಯ ಅಧಿಕಾರಿಯನ್ನೇ ಕೆಲಸದಿಂದ ತೆಗೆದು ಹಾಕಿದ್ದು ಸರಿಯೇ ಎಂಬ ವಿಚಾರವೂ ವಿಚಾರಣೆ ಆಗುತ್ತಿತ್ತು. ಆದರೆ, ಇದಾವುದಕ್ಕೂ ಅವಕಾಶಕೊಡದೆ ನ್ಯಾಯಾಂಗ ವಿಚಾರಣೆಯನ್ನು ರದ್ದುಗೊಳಿಸಲಾಯಿತು. ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ನ್ಯಾಯಾಂಗ ತನಿಖೆಯನ್ನು ಪುನಃ ಪ್ರಾರಂಭಿಸಬೇಕೆಂದು ವಿರೋಧ ಪಕ್ಷಗಳು ಎಷ್ಟು ಒತ್ತಾಯಿಸಿದರೂ ಸರಕಾರ ಕೇಳಲೇ ಇಲ್ಲ! ಡಿ. ಜಿ. ಸಿ. ಎ. ತನ್ನ ಕರ್ತವ್ಯ ನಿರ್ವಹಣೆಯನ್ನು ತೃಪ್ತಿಕರವಾಗಿ ಮಾಡಿದೆಯೇ ಎನ್ನುವ ಕುರಿತು ಸತ್ಯಾಂಶ ದೊರೆಯುವುದಿಲ್ಲ!

ಸಂಜಯಗಾಂಧಿ ಬದುಕಿದ್ದಾಗಲೂ ಆತನ ಚಟುವಟಿಕೆಗಳ ಕುರಿತು ಎಷ್ಟೋ ರಹಸ್ಯಗಳು, ಅಕ್ರಮಗಳು ಇದ್ದವು. ಸತ್ತನಂತರವೂ ಆತನ ದುರ್ಮರಣಕ್ಕೆ ಕಾರಣವಾದ ಎಷ್ಟೋ ವಿಷಯಗಳು ಅಕ್ರಮಗಳು ಇನ್ನೂ ರಹಸ್ಯವಾಗಿಯೇ ಉಳಿಯಬೇಕೆ? ಅವನ ಮರಣಕ್ಕಾಗಿ ಶೋಕಿಸುವವರು, ಅವನ ಮರಣಕ್ಕೆ ನಿಜವಾದ ಕಾರಣಗಳೇನು, ಹೊಣೆಗಾರರು ಯಾರು ಎಂದು ಸತ್ಯಾಂಶ ಸಾರ್ವಜನಿಕರಿಗೆ ತಿಳಿಸಲು ಭಯಪಡುವುದೇಕೆ?

* ದೇಶದ ಒಟ್ಟು ನಿರುದ್ಯೋಗಸ್ಥರು: 15 ಮಿಲಿಯ!

ಕೇಂದ್ರ ಕಾರ್ಮಿಕ ಮಂತ್ರಿ ಟಿ. ಅಂಜಯ್ಯನವರು ತಾ. 3-7-80ರಂದು ಲೋಕಸಭೆಗೆ ನೀಡಿದ ಹೇಳಿಕೆ ಒಂದರಂತೆ ದೇಶದಲ್ಲಿ ಇಂದು ಉದ್ಯೋಗ ವಿನಿಮಯಗಳಲ್ಲಿ ಹೆಸರು ದಾಖಲೆ ಮಾಡಿಸಿದ ನಿರುದ್ಯೋಗಸ್ಥರ ಸಂಖ್ಯೆಯೇ 14.843 ಮಿಲಿಯದಷ್ಟಾಗಿದೆ ಎಂದು ಯು. ಎನ್. ಐ. ವರದಿಯಿಂದ ತಿಳಿದು ಬಂದಿದೆ (ಇಂಡಿಯನ್ ಎಕ್ಸ್‌ಪ್ರೆಸ್: 4-7-80). ರಾಜ್ಯಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆಯನ್ನು ಪ್ರತ್ಯೇಕವಾಗಿ ಈ ಕೆಳಗೆ ಕೊಡಲಾಗಿದೆ.

ಪ. ಬಂಗಾಳ :	2,199,000	ಒರಿಸ್ಸಾ :	432 000
ಬಿಹಾರ :	2,169,000	ಪಂಜಾಬ್ :	414,000
ಉ. ಪ್ರದೇಶ :	1,376,000	ರಾಜಸ್ಥಾನ :	332,000
ಆಂಧ್ರಪ್ರದೇಶ:	1,298,000	ಹರಿಯಾಣ :	329 000
ಕೇರಳ :	1,275,000	ಅಸ್ಸಾಂ :	327,000
ಮಹಾರಾಷ್ಟ್ರ :	1,123,000	ಹಿಮಾಚಲ-ಪ್ರದೇಶ :	126,000
ತಮಿಳುನಾಡು:	1,100,000	ಮಣಿಪುರ :	88,000
ಮ. ಪ್ರದೇಶ :	771,000	ತ್ರಿಪುರ :	68,000
ಕರ್ನಾಟಕ :	560,000	ಜಮ್ಮು & ಕಾಶ್ಮೀರ :	54,000
ಗುಜರಾತ್ :	436,000	ಮೇಘಾಲಯ :	10,000
		ನಾಗಾಲ್ಯಾಂಡ್ :	4,000

(ನಿರುದ್ಯೋಗಸ್ಥರಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚು ವಿದ್ಯಾವಂತರು. ವಿದ್ಯಾವಂತ ನಿರುದ್ಯೋಗಸ್ಥರಲ್ಲಿ ಪದವೀಧರರೂ, ಇಂಜಿನಿಯರುಗಳೂ, ಡಾಕ್ಟರರೂ, ಸ್ನಾತಕೋತ್ತರ ಪದವೀಧರರೂ ಇದ್ದಾರೆ.)

* ಚುನಾವಣೆಗಳಲ್ಲಿ ಹಿಂಸೆ!

ಕಳೆದ ಒಂಭತ್ತು ವಿಧಾನಸಭೆಗಳಿಗೆ ನಡೆದ ಚುನಾವಣೆಯು ಸ್ವಾತಂತ್ರ್ಯಾನಂತರದ ಎಲ್ಲಾ ಚುನಾವಣೆಗಳಿಗಿಂತ ಅತ್ಯಂತ ಹಿಂಸಾತ್ಮಕವಾಗಿತ್ತು ಎಂದು ಯು. ಎನ್. ಐ. ವರದಿಯಿಂದ ತಿಳಿದು ಬಂದಿದೆ (ಇಂಡಿಯನ್ ಎಕ್ಸ್‌ಪ್ರೆಸ್: 27-6-80). ಕಳೆದ ಚುನಾವಣೆಯಲ್ಲಿ ಸಂಭವಿಸಿದ ಹಿಂಸಾತ್ಮಕ ಘರ್ಷಣೆಗಳಿಂದ ಆರು ಅಭ್ಯರ್ಥಿಗಳೂ ಸೇರಿದಂತೆ ಒಟ್ಟು 90 ಜನರು ಮೇ 80ರಲ್ಲಿ ಸತ್ತಿರುವುದಾಗಿ ಕೇಂದ್ರ ಗೃಹಸಚಿವರಾದ ಯೋಗೇಂದ್ರ ಮಕ್ವಾನ ಅವರು ಪಿ. ರಾಜನ್ (ಸಿ. ಪಿ. ಐ-ಎಂ) ಅವರು ಕೇಳಿದ ಪ್ರಶ್ನೆ ಒಂದಕ್ಕೆ ರಾಜ್ಯಸಭೆಯಲ್ಲಿ ಉತ್ತರವಿತ್ತರು. ರಾಜ್ಯಗಳಲ್ಲಿ ಸಂಭವಿಸಿದ ಮರಣಗಳ ಸಂಖ್ಯೆ ಹೀಗಿದೆ.

ಬಿಹಾರ	: 58;	ಗುಜರಾತ್	: 2	ಮ. ಪ್ರದೇಶ :	1
ಉ. ಪ್ರದೇಶ	: 12;	ಒರಿಸ್ಸಾ	: 2	ಮಹಾರಾಷ್ಟ್ರ :	1
ತಮಿಳುನಾಡು:	6;	ಪಂಜಾಬ್	: 2	ರಾಜಾಸ್ಥಾನ :	—

* 1979 ರಲ್ಲಿ 37.10 ಮಿಲಿಯ ಕೆಲಸದ ದಿನಗಳ ನಷ್ಟ!

1979ರಲ್ಲಿ 37.10 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದು, 1974ರ ನಂತರ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿರುವುದಾಗಿ ಲೇಬರ್ ಬ್ಯೂರೋ ಅಂಕಿಸಂಖ್ಯೆಗಳಿಂದ ತಿಳಿದುಬಂದಿದೆ (ಯು. ಎನ್. ಐ. ವರದಿ: 4-5-80). ರಾಜ್ಯಗಳಲ್ಲಿ ಕೆಲಸದ ದಿನಗಳು ನಷ್ಟವಾದ ಅಂಕಿಸಂಖ್ಯೆ ಹೀಗಿವೆ:

ಪ. ಬಂಗಾಳ :	16 ಮಿಲಿಯ ಕೆಲಸದ ದಿನಗಳು. ಅವುಗಳಲ್ಲಿ 13.6 ಮಿಲಿಯ ದಿನಗಳು ಮುಷ್ಕರಗಳಿಂದಾಗಿ ನಷ್ಟವಾಗಿದ್ದರೆ, 2.85 ಮಿಲಿಯ ದಿನಗಳು ಲಾಕ್‌ಔಟ್‌ಗಳಿಂದ ನಷ್ಟವಾಗಿವೆ.
ತಮಿಳ್‌ನಾಡು :	8 ಮಿಲಿಯ ಕೆಲಸದ ದಿನಗಳು.
ಕೇರಳ :	3 ಮಿಲಿಯ ಕೆಲಸದ ದಿನಗಳು.
ಮಹಾರಾಷ್ಟ್ರ :	2.37 ಮಿಲಿಯ ಕೆಲಸದ ದಿನಗಳು.
ಉ. ಪ್ರದೇಶ :	1.20 ಮಿಲಿಯ ಕೆಲಸದ ದಿನಗಳು.
ಬಿಹಾರ :	1.10 ಮಿಲಿಯ ಕೆಲಸದ ದಿನಗಳು.
1974ರಲ್ಲಿ :	40.26 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಮುಖ್ಯ ಕಾರಣ ರೈಲ್ವೆ ನೌಕರರ ಮುಷ್ಕರದಿಂದಾಗಿ 10 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು.
1975ರಲ್ಲಿ :	21.9 ಮಿಲಿಯ ಕೆಲಸದ ದಿನಗಳು.
1976ರಲ್ಲಿ :	12.8 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಒಂದು ದಶಕದಲ್ಲಿಯೇ ಅತ್ಯಂತ ಕಡಿಮೆ ಕೆಲಸದ ದಿನಗಳ ನಷ್ಟ. ಕಾರಣ ತುರ್ತುಪರಿಸ್ಥಿತಿಯಲ್ಲಿ ಮುಷ್ಕರಗಳನ್ನು ನಿಷೇಧಿಸಲಾಗಿತ್ತು.
1977ರಲ್ಲಿ :	25.3 ಮಿಲಿಯ ಕೆಲಸದ ದಿನಗಳು.
1978ರಲ್ಲಿ :	28.3 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಈ ವರ್ಷ 3187 ಕೈಗಾರಿಕಾ ವಿವಾದಗಳಿದ್ದು, 1.92 ಮಿಲಿಯ ಕೆಲಸಗಾರರು ಭಾಗವಹಿಸಿದ್ದರು.
1979ರಲ್ಲಿ :	37.10 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಈ ವರ್ಷ 2829 ಕೈಗಾರಿಕಾ ವಿವಾದಗಳಿದ್ದು, 2.75 ಮಿಲಿಯ ಕೆಲಸಗಾರರು ಭಾಗವಹಿಸಿದ್ದರು.

ಹೆಚ್ಚಿನ ಕೈಗಾರಿಕಾ ವಿವಾದಗಳು ರಾಜ್ಯಸರಕಾರಗಳ ವ್ಯಾಪ್ತಿಗೊಳಗಾಗಿದ್ದು, ವೇತನ, ಭತ್ತೆ, ಬೋನಸ್ ಈ ಮೂರು ವಿಷಯಗಳೇ ವಿವಾದಗಳಿಗೆ ಮುಖ್ಯ ಕಾರಣಗಳಾಗಿದ್ದು, ಕೆಲಸದ ದಿನಗಳ ನಷ್ಟಕ್ಕೂ ಕಾರಣವಾದವು. ಇದರಿಂದ ತಿಳಿದುಬರುವುದೇನೆಂದರೆ, 1975-76 ಮತ್ತು 1976-77ರ ತುರ್ತುಪರಿಸ್ಥಿತಿಯಲ್ಲಿ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿ ಆರ್ಥಿಕ ದುಃಸ್ಥಿತಿಯ ಭಾರಗಳನ್ನೆಲ್ಲಾ ಅವರ ಹೆಗಲ ಮೇಲೆಯೇ ಹೊರಿಸಲಾಯಿತು. ತುರ್ತುಪರಿಸ್ಥಿತಿ ಕಳೆದ ಮೇಲೆ 1978 ಮತ್ತು 1979ರಲ್ಲಿ ಜನತಾ ಸರಕಾರ ಸೂಕ್ತ ಪರಿಹಾರ ನೀಡದೇ ಇದ್ದುದರಿಂದ ಪುನಃ ಮುಷ್ಕರಗಳ ಅಲೆಗಳು ಮೇಲೆದ್ದವು.

ಜನಸೇವೆಗೆ ಜನತೆಗೇ ಅಧಿಕಾರ ಕೊಡಿ

(2ನೇ ಪುಟದಿಂದ)

ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳ ಎಲ್ಲಾ ರಾಜಕೀಯ ಪಕ್ಷಗಳ ಸಮ್ಮೇಳನವೊಂದನ್ನು ಕರೆದು ಕೇಂದ್ರ-ರಾಜ್ಯಗಳ ಅಧಿಕಾರಿಗಳ ಮರುಹೊಂದಾಣಿಕೆಯ ಬಗ್ಗೆ ಅವರೊಂದಿಗೆ ಕೂಲಂಕುಶ ಚರ್ಚೆಯಾಗಬೇಕೆಂಬ ನಮ್ಮ ಪ್ರಸ್ತಾಪವನ್ನು ಕೇಂದ್ರ ಸರಕಾರವು ಒಪ್ಪಿಕೊಳ್ಳಬೇಕು ಎಂದು ನಾನು ಮನವಿ ಮಾಡುತ್ತೇನೆ. ಇಂತಹ ಸಮ್ಮೇಳನವೊಂದಕ್ಕೆ ಇದು ಅತ್ಯಂತ ಸೂಕ್ತವಾದ ಸಮಯ. ಯಾಕೆಂದರೆ ದೇಶದ ಜೀವನವನ್ನು ಕಲಕುವಂತಹ ಪ್ರವೃತ್ತಿಯು ದೇಶಾದ್ಯಂತ ಬೆಳೆಯುತ್ತಿದೆ.

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಡಬೇಕು. ಆಗ ಮಾತ್ರ ರಾಜ್ಯ ಸರ್ಕಾರಗಳು ಜಿಲ್ಲಾ ಮಂಡಳಿಗಳಿಗೆ ಮತ್ತು ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಡಲು ಸಾಧ್ಯವಾಗುತ್ತದೆ. ಆ ನಂತರ ಮಾತ್ರ ಜನತೆಯ ಅಭಿಲಾಶೆಗಳು ಈಡೇರಲು ಸಾಧ್ಯವಾಗುತ್ತದೆ.

ವಂದನೆಗಳು

●

ಮಂಗಳೂರು ತಾಲ್ಲೂಕು ಯುವಜನ ಸಮಾವೇಶ

ಮಂಗಳೂರು ತಾಲ್ಲೂಕಿನ ಯುವಜನರ ಸಮಾವೇಶವು ಜುಲೈ 6ರಂದು ಮಂಗಳೂರಿನ ಕೇಂದ್ರ ಸಹಕಾರಿ ಬ್ಯಾಂಕ್ ಕಟ್ಟಡದ ಸಭಾಂಗಣದಲ್ಲಿ ಶ್ರೀ ಆನಂದ ಗಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘಟನಾ ಸಮಿತಿಯ ಸಂಚಾಲಕರಾದ ಶ್ರೀ ಬಿ. ಉಮಾನಾಥರು ಸ್ವಾಗತ ಭಾಷಣ ಮಾಡುತ್ತಾ ಯುವಜನರ ಮುಂದಿರುವ ಸಮಸ್ಯೆಗಳನ್ನು ವಿವರಿಸಿದರು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಪರಿಣಾಮವಾಗಿ ಬೆಳೆದು ಬರುತ್ತಿರುವ ನಿರುದ್ಯೋಗ, ಬಡತನ ಮತ್ತು ದಾರಿದ್ರ್ಯದಿಂದ ಕಂಗಾಲಾಗಿರುವ ಯುವಜನತೆ, ಭವಿಷ್ಯದ ಬಗ್ಗೆ ಕಟ್ಟಿಕೊಂಡ ಸುಂದರ ಕನಸುಗಳೆಲ್ಲಾ ನುಚ್ಚುನೂರಾಗುತ್ತಿರುವ ಪರಿಸ್ಥಿತಿಯಲ್ಲಿ ಹತಾಶೆ ಬೆಳೆಯುತ್ತಿರುವುದನ್ನು ತೋರಿಸಿಕೊಟ್ಟ ಅವರು, ಯುವಜನರ, ಒಂದು ಪುರೋಗಾಮಿ ಸಂಘಟನೆಯಲ್ಲಿ ಒಟ್ಟು ಸೇರಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಕರ್ನಾಟಕದ ರಾಜ್ಯ 'ಸಮುದಾಯ'ದ ಉಪಾಧ್ಯಕ್ಷರಾದ ಶ್ರೀ ಬಿ. ಮಾಧವ ಅವರು ಮಾತನಾಡಿ, ಅಂಧಶ್ರದ್ಧೆ, ಮೂಢನಂಬಿಕೆಗಳು ಹಾಗೂ ಅನೇಕ ಹಳೆಯ ಮೌಲ್ಯಗಳು ಸಮಾಜದ ಪ್ರಗತಿಗೆ ಹೇಗೆ ಮಾರಕವಾಗುತ್ತಿವೆಯೆಂಬುದನ್ನು ವಿವರಿಸಿ. ಜಾತೀಯತೆ, ವರದಕ್ಷಿಣೆ, ಭ್ರಷ್ಟಾಚಾರ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಯುವಕರು ಹೋರಾಡಬೇಕೆಂದು ಕರೆ ನೀಡಿದರು.

ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರೂ, ಸರ್ಜರಿ ವಿಭಾಗದ ಮುಖ್ಯಸ್ಥರೂ ಆದ ಡಾ. ಪಿ ಕೆ ಆರ್. ವಾರಿಯರ್ ಅವರು ಮಾತನಾಡುತ್ತಾ ಪ್ರಪಂಚದ ನಾನಾ ಭಾಗಗಳಲ್ಲಿ ಯುವಜನತೆ ನಡೆಸಿದ ಹೋರಾಟಗಳನ್ನೂ, ನಮ್ಮ ದೇಶದ ಪುರೋಗಾಮಿ ಯುವಜನ ಚಳುವಳಿಗಳ ಇತಿಹಾಸವನ್ನೂ ವಿವರಿಸಿದರು. ಯುವಜನರು ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿಕೊಂಡು ಸಮಾಜದ ಸಮಸ್ಯೆಗಳಿಗೆ ವೈಜ್ಞಾನಿಕವಾದ ಪರಿಹಾರಗಳನ್ನು ಕಂಡುಹಿಡುಕಬೇಕೆಂದೂ, ಮಾನವನಿಂದ ಮಾನವನ ಶೋಷಣೆಯು ಕೊನೆಗೊಳ್ಳುವ ನವಸಮಾಜದ ರಚನೆಗಾಗಿ ಶ್ರಮಿಸಬೇಕೆಂದೂ ಅವರು ಕರೆ ನೀಡಿದರು.

ಶ್ರೀ ಕೆ. ಆರ್. ಶ್ರೀಯಾನ್, ಶ್ರೀ ಯು. ಜನಾರ್ದನ ನಾಯಕ್, ಶ್ರೀ ಚಂದ್ರಹಾಸ, ಶ್ರೀ ಬಾಲಕೃಷ್ಣ ಶೆಟ್ಟಿ ಮತ್ತು ಶ್ರೀ ಸದಾಶಿವ ಅವರೂ ಮಾತನಾಡಿ, ಯುವಜನರ ಕರ್ತವ್ಯಗಳನ್ನು ವಿವರಿಸಿದರು.

ಬೆಲೆಏರಿಕೆ ಮತ್ತು ಮಂಗಳೂರಿನಲ್ಲಿ ಸಿಟಿ ಬಸ್ ದರಗಳ ಏರಿಕೆಯನ್ನು ವಿರೋಧಿಸುವ ಠರಾವುಗಳನ್ನು ಅಂಗೀಕರಿಸಲಾಯ್ತು.

ಶ್ರೀ ಬಿ. ಉಮಾನಾಥರು ಸಂಚಾಲಕರಾಗಿಯೂ, ಶ್ರೀ ಯು. ಬಿ. ನಾರಾಯಣ ಮತ್ತು ಶ್ರೀ ಬಾಲಕೃಷ್ಣ ಶೆಟ್ಟಿಯವರು ಸಹಸಂಚಾಲಕರಾಗಿಯೂ ಇರುವ 21 ಜನರನ್ನೊಳಗೊಂಡ ಸಂಘಟನಾ ಸಮಿತಿಯನ್ನು ಆರಿಸಲಾಯ್ತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದು ಆರಂಭವಾದ ಈ ಸಂಘಟನೆಯು ಯುವಜನರ ಭವಿಷ್ಯವನ್ನು ರೂಪಿಸುವ ಹೋರಾಟದ ಸಾಧನವಾಗಿ ಬೆಳೆದು ಬರಲೆಂದು ಹಾರೈಸಿದರು. ಯುವಜನರಲ್ಲಿ ಆತ್ಮವಿಶ್ವಾಸವನ್ನು ತುಂಬಿ, ಸಮಾಜದ ದುರ್ಬಲ ವರ್ಗಕ್ಕೂ ಜನಸಾಮಾನ್ಯರಿಗೂ ಪ್ರಯೋಜನವಾಗುವಂತಹ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಶ್ರೀ ಯು. ಬಿ. ನಾರಾಯಣರು ವಂದನಾರ್ಪಣೆ ಮಾಡಿದರು. ತಾಲ್ಲೂಕಿನ ವಿವಿಧ ಭಾಗಗಳಿಂದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಕರ್ತವ್ಯಗಳು

(ಒಂದನೇ ಪುಟದಿಂದ)

ತ್ತಿವೆ. ತ್ರಿಪುರದಲ್ಲೂ ವಿದೇಶಿ ಸಾಮ್ರಾಜ್ಯಶಾಹಿಗಳ ಕೈವಾಡ ಇದೆಯೆಂಬುದಕ್ಕೆ ಸಾಕ್ಷ್ಯಗಳಿವೆ.

ಕೇಂದ್ರದ ಸಹಾಯದೊಡನೆ ವಾಮರಂಗ ಸರ್ಕಾರವು ರಾಜ್ಯದ ಶಾಂತಿಯನ್ನು ಕಾಪಾಡಲು ಯತ್ನಿಸುತ್ತಿದೆ, ತ್ರಿಪುರ ಸರ್ಕಾರ ತುಂಬ ಕಷ್ಟದ ಕೆಲಸ ಮಾಡಬೇಕಾಗಿದೆ. ತ್ರಿಪುರದ ಕಾಂಗ್ರೆ ಮತ್ತಿತರರು ವಾಮರಂಗ ಸರ್ಕಾರದ ವಜಾ ಕೇಳುತ್ತಿದ್ದಾರೆ. ಆದರೆ ಕೇಂದ್ರವು ಬೇರೆ ನಿಲುವು ತಳೆದಿರುವುದು ಸ್ವಾಗತಾರ್ಹ.

ತ್ರಿಪುರ ಮತ್ತು ಅಸ್ಸಾಂಗಳ ಗಂಭೀರ ಪರಿಸ್ಥಿತಿಯನ್ನು ಗಮನಿಸಿ, ಅದರ ಅಂಶಗಳನ್ನು ಜನತೆಯ ಮುಂದೆ ವಿವರಿಸಬೇಕೆಂದು ಕೇಂದ್ರಸಮಿತಿಯು ಎಲ್ಲ ಘಟಕಗಳಿಗೆ ಮನವಿ ಮಾಡುತ್ತದೆ.

ಕೇಂದ್ರ ಸಮಿತಿಯು ಒಂಬತ್ತು ರಾಜ್ಯಗಳ ವಿಧಾನಸಭೆ ಚುನಾವಣಾ ಫಲಿತಾಂಶಗಳನ್ನು ಪರಿಶೀಲಿಸಿತು. ಕಾಂಗ್ರೆ ವಿಜಯವು ಅತಿ ಕಡಿಮೆ ಶೇಕಡಾವಾರಿನಿಂದ ಬಂದಿದೆ ಎಂಬುದನ್ನು ಕೇಂದ್ರಸಮಿತಿ ಗಮನಿಸಿತು. ಮತದಾರರಲ್ಲಿ ಅರ್ಧಸಂಖ್ಯೆಯಷ್ಟು ಮಾತ್ರ ಮತ ಚಲಾಯಿಸಿದ್ದಾರೆ. ಇದು ನಮ್ಮ ಸಂಸತ್ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಅತಿ ಕಡಿಮೆ. ಬಿದ್ದ ಮತಗಳಲ್ಲೂ ಕಾಂಗ್ರೆಗೆ ಶೇ. 16 ರಿಂದ 23ರಷ್ಟು ಬಂದಿದೆ. ಜನತೆ ಕಾಂಗ್ರೆನಿಂದ ದೂರವಾಗುತ್ತಿದ್ದಾರೆ. ತಮಿಳುನಾಡು ಇವೆಲ್ಲದಕ್ಕೆ ಅಪವಾದವಾಗಿ ನಿಂತಿದೆ. ಎಐಡಿಎಂಕೆ, ವಾಮ ಪಕ್ಷಗಳು, ಕಾಂಗ್ರೆಸ್ (ಯು) ಇವೆಲ್ಲವೂ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆ-ಡಿಎಂಕೆ ಮೈತ್ರಿಗೆ ಬಲವಾದ ಪೆಟ್ಟುಕೊಟ್ಟಿವೆ. ಪಂಜಾಬ್‌ನಲ್ಲೂ ಕಾಂಗ್ರೆಗೆ ಕೇವಲ 5 ಸೀಟುಗಳ ವಿಜಯ ದೊರೆತಿದೆ.

ಉತ್ತರ ಪ್ರದೇಶ ಬಿಹಾರಗಳ ಚುನಾವಣಾ ಗಲಭೆಗಳನ್ನು ಕೇಂದ್ರ ಸಮಿತಿ ಕಾಳಜಿಯಿಂದ ಪರಿಶೀಲಿಸಿತು. ವಂಚನೆ, ಹಿಂಸೆಗಳು ಧಾರಾಳವಾಗಿ ಬಿಹಾರದಲ್ಲಿ ನಡೆದವು.

ಕಾಂಗ್ರೆಸ ವಿಜಯಕ್ಕೆ ಕಾರಣ ಬೂರ್ಜ್ವಾ ಭೂಮಾಲೀಕ ವಿರೋಧ ಪಕ್ಷಗಳೇ. ಲೋಕಸಭೆ ಚುನಾವಣೆಯಿಂದ ಪಾಠ ಕಲಿಯದೆ ಜನತಾ, ಜನತಾ (ಎಸ್)ಗಳು ಮತ್ತಷ್ಟು ಒಡೆದು, ಕಾಂಗ್ರೆ ವಿರುದ್ಧ ಹೋರಾಡುವುದಕ್ಕಿಂತ ಹೆಚ್ಚಾಗಿ ತಮ್ಮಲ್ಲೇ ಬಡಿದಾಡಿದವು. ಆರೆಸ್ಸೆಸ್-ಜನಸಂಘ ತನ್ನ ಅಭ್ಯರ್ಥಿಗಳು ಬಾರದ ಕಡೆ ಕಾಂಗ್ರೆಗೆ ಸಹಾಯ ಮಾಡಿತು.

ತಮಿಳುನಾಡಿನಲ್ಲಿ ಇದಕ್ಕೆ ವಿರುದ್ಧ ನಡೆದಿದೆ. ಕೇರಳದ ನಿಲಂಬೂರು ಉಪಚುನಾವಣೆಯಲ್ಲೂ ವಿಶಿಷ್ಟ ಜಯ ಲಭಿಸಿದೆ. ಚುನಾವಣೆಯಿಂದ ಪಾಠ ಕಲಿತು ಒಂದಾಗುವಂತೆ ವಿರೋಧಪಕ್ಷಗಳಿಗೆ ಕೇಂದ್ರ ಸಮಿತಿ ಕರೆ ನೀಡುತ್ತದೆ. ಆಡಳಿತ ಪಕ್ಷಕ್ಕೆ ಸಿಕ್ಕಿರುವ ತೆಳು ವಿಜಯವು ಸರ್ವಾಧಿಕಾರಕ್ಕೆ ದಾರಿ ಮಾಡುತ್ತದೆ.

ಜನತೆಯ ಮೇಲೆ ಆಕ್ರಮಣ :

ಈ ಬಾರಿಯ ಮುಂಗಡಪತ್ರ ವಂಚನೆಯಿಂದ ಕೂಡಿದೆ, ಮುಂಗಡ ಪತ್ರಕ್ಕೆ ಒಂದು ವಾರಕ್ಕೆ ಮುಂಚೆ ರೈಲು, ವಿಮಾನಯಾನದ ದರ, ಪೆಟ್ರೋಲಿಯಂ ವಸ್ತುಗಳ ದರ, ರಾಸಾಯನಿಕಗಳ ದರ ಹೆಚ್ಚಿಸಲಾಗಿದೆ, ಇವೆಲ್ಲ ಬೆಲೆಗಳನ್ನು ಏರಿಸುತ್ತವೆ. ಜೊತೆಗೆ 1400 ಕೋಟಿ ರೂ.ಗಳ ಖೋತಾ ಹೇರಲಾಗಿದೆ. ಎಲ್ಲವೂ ಕೆಲಸ ಮತ್ತು ವೇತನ ಮಟ್ಟಗಳ ಮೇಲೆ ಪ್ರಹಾರಮಾಡಿ, ರೈತರನ್ನು ದಿವಾಳಿ ಎಬ್ಬಿಸುತ್ತವೆ ಎಂದು ಕೇಂದ್ರಸಮಿತಿ ಅಭಿಪ್ರಾಯ ಪಡುತ್ತದೆ.

ಈ ಕ್ರಮಕ್ಕೆ ತಡೆಯೊಡ್ಡುವುದು ವಾಮ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೊದಲ ಕರ್ತವ್ಯವಾಗಿದೆ. ಕಾಂಗ್ರೆಸ ತೆಳುವಿಜಯವು ಸರ್ವಾಧಿಕಾರಕ್ಕೆ ದಾರಿಮಾಡುವುದಲ್ಲದೆ ಅದರ ವಿರುದ್ಧ ಜನತೆಯನ್ನು ಸಂಘಟಿಸುವ ಅವಕಾಶವನ್ನೂ ಕೊಡುತ್ತದೆ. ಈ ಹೋರಾಟವನ್ನು ನಡೆಸುವುದರ ಜೊತೆಗೆ ನಿರುದ್ಯೋಗ ಪರಿಹಾರ, ವೃದ್ಧ ಕೃಷಿಕಾರ್ಮಿಕರಿಗೆ ವಿಶ್ರಾಂತಿ ವೇತನ, ಸಾಲರದ್ದು, ಮುಂತಾದ ಕ್ರಮಗಳನ್ನೂ ಜನತೆಗೆ ನೀಡಬೇಕಾಗಿದೆ. ವಾಮರಂಗ ಸರ್ಕಾರಗಳು ಇದನ್ನು ಈಗಾಗಲೇ ಜಾರಿಮಾಡಿವೆ.

ಮುಂದಿನ ಸಮರವನ್ನು ಗೆಲ್ಲಲು ವಾಮಪಕ್ಷಗಳು ಒಂದಾಗಬೇಕಾಗಿದೆ. ಟ್ರೇಡ್‌ಯೂನಿಯನ್‌ಗಳು, ಇತರ ಸಾಮೂಹಿಕ ಸಂಘಟನೆಗಳು ಒಗ್ಗಟ್ಟಾಗಿ ಶ್ರಮಜೀವಿ ಜನತೆಯನ್ನು ಸಂಘಟಿಸಬೇಕಾಗಿದೆ. ನಮ್ಮ ಘೋಷಣೆಗಳಿಗೆ ಒಪ್ಪುವ ಇತರ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಅವಶ್ಯಕತೆಯಿದೆ.

ಜನತೆಯ ನಡುವೆ ನಡೆಸುವ ಚಟುವಟಿಕೆಗಳನ್ನು ಸಂಸತ್ ಮತ್ತು ವಿಧಾನಸಭೆಗಳ ಚಟುವಟಿಕೆಗಳೊಡನೆ ಬೆಸೆಯಬೇಕಾಗಿದೆ. ಸರ್ಕಾರದ ಪ್ರಹಾರಗಳ ವಿರುದ್ಧ ದನಿಯೆತ್ತಲು ವಿರೋಧ ಪಕ್ಷಗಳನ್ನು ಒಗ್ಗೂಡಿಸಿ ಐಕ್ಯವಿರೋಧ ರೂಪಿಸಬೇಕಾಗಿದೆ.

ಇತ್ತೀಚೆಗೆ ಬೆಳೆಯುತ್ತಿರುವ ವಾಮಪಂಥೀಯ ಐಕ್ಯತೆಯ ಬಗ್ಗೆ ಕೇಂದ್ರ ಸಮಿತಿ ಸಮಾಧಾನ ವ್ಯಕ್ತಪಡಿಸುತ್ತದೆ. ಇದನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.

ಪಕ್ಷದ ಘಟಕಗಳು ತಮ್ಮ ದೌರ್ಬಲ್ಯಗಳನ್ನು ಪರಿಹರಿಸಿಕೊಂಡು ಬಲ ಪಡೆಯುವಂತೆ ಕೇಂದ್ರಸಮಿತಿ ಕರೆ ನೀಡುತ್ತದೆ. ಸಾಮೂಹಿಕ ಸಂಘಟನೆಗಳನ್ನು ಬಲಪಡಿಸಿ ದೈನಂದಿನ ಚಟುವಟಿಕೆಗಳನ್ನು, ರಾಜಕೀಯ ಪ್ರಚಾರಗಳನ್ನು ಹೆಚ್ಚಿಸಬೇಕು. ದೇಶದ ಐಕ್ಯತೆಯನ್ನು ಕಾಪಾಡಲು, ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಇಡೀ ಪಕ್ಷವೇ ಕ್ರಿಯೆಗೆ ತೊಡಗಬೇಕು. ಕಾಂಗ್ರೆಸ ಸರ್ವಾಧಿಕಾರಿ ಪ್ರವೃತ್ತಿಗೆ ತಡೆ, ವಾಮರಂಗ ಸರ್ಕಾರಗಳ ರಕ್ಷಣೆ ಇವುಗಳಿಗಾಗಿ ಹೋರಾಟ ನಡೆಸಬೇಕಾಗಿದೆ.

"ಕಾರ್ಮಿಕ ವರ್ಗಕ್ಕೆ ಒಂದು ಹೊಸ ಮಾರ್ಗ ಬೆಂಗಳೂರು ನಗರ ಕಾರ್ಮಿಕರಿಂದ"

ಬೆಂಗಳೂರು ನಗರದಲ್ಲಿ ಸುಮಾರು 115 ದಿನಗಳಿಂದ ಹೋರಾಟ ಮಾಡುತ್ತಿರುವ 2,200 ಐ ಟಿ ಸಿ. ಕಾರ್ಮಿಕರಿಗೆ "ಮೈಕೋ" ಕಾರ್ಮಿಕರಿಂದ ಮತ್ತೆ ಧಾನ್ಯ ಹಂಚಿಸಲಾಯಿತು. ಪ್ರತಿ ಕಾರ್ಮಿಕರ ಕುಟುಂಬಕ್ಕೆ ತಲಾ 12 ಕೆ. ಜಿ. ಯಂತೆ ಅಕ್ಕಿ ಮತ್ತು ರಾಗಿಯನ್ನು ತಾ. 6-7-1980ರಂದು ಐ. ಟಿ ಸಿ. ಸಮೀಪವಿರುವ ವರ್ಕ್ಸ್ ಸೆಂಟರ್‌ನಲ್ಲಿ ಹಂಚಲಾಯಿತು. ಸಿ. ಐ. ಟಿ ಯು. ಸಂಘಗಳಿಂದ ಪ್ರತಿ ಕುಟುಂಬಕ್ಕೆ ತಲಾ 5 ರೂ.ನಂತೆ ಹಣವನ್ನು ಕೊಡಲಾಗಿದೆ. ಮೈಕೋ ಕಾರ್ಮಿಕರಿಂದ ಇದು ಎರಡನೇ ಸಾರಿ ಧಾನ್ಯ ಹಂಚಿಕೆಯಾಗಿರುವುದು. ಐ. ಟಿ ಸಿ ಕಾರ್ಮಿಕರಿಗೆ ಈ ಕೆಳಕಂಡ ಕಾರ್ಮಿಕರು ಮತ್ತು ಸಂಘಗಳಿಂದ ಹಣ ಸಹಾಯ ಮಾಡಲಾಗಿದೆ.

1. ಜಯರಾಮ್ ದಾಸ್ ಉದ್ಯೋಗ ಎಂಪ್ಲಾಯೀಸ್ ಯೂನಿಯನ್‌ನಿಂದ 500 ರೂ ಗಳು 2. ಸೂರಿ ಅಂಡ್ ನಾಯರ್ ಎಂಪ್ಲಾಯೀಸ್ ಯೂನಿಯನ್‌ನಿಂದ500ರೂ.ಗಳು 3. ಹರ್ಬರ್ಟ್ಸ್ ಇಂಡಿಯಾ ಎಂಪ್ಲಾಯೀಸ್ ಯೂನಿಯನ್‌ನಿಂದ 400 ರೂ.ಗಳು 4. ಡೆಕ್ಕನ್ ವೈಯರ್ ಎಂಪ್ಲಾಯೀಸ್ ಯೂನಿಯನ್‌ನಿಂದ 500 ರೂ, ಗಳು 5. ಬೆಂಗಾಲ್ ಲ್ಯಾಂಪ್ಸ್ ಎಂಪ್ಲಾಯೀಸ್ ಯೂನಿಯನ್‌ನಿಂದ 800 ರೂ.ಗಳು 6. ಬೆಂಗಳೂರು ಈಸ್ಟ್ ಜನರಲ್ ಎಂಪ್ಲಾಯೀಸ್ ಯೂನಿಯನ್‌ನಿಂದ 500 ರೂ.ಗಳು.

ಇನ್ನೂ ಅನೇಕ ಕಾರ್ಮಿಕರ ಸಂಘಗಳಿಂದ ಧನಸಹಾಯ ಮಾಡಲು ಮುಂದೆ ಬರುತ್ತಿದ್ದಾರೆ. ಸುಮಾರು 2,200 ಐ. ಟಿ. ಸಿ. ಕಾರ್ಮಿಕರ ಹೋರಾಟವು ಬೇರೆ ಕಾರ್ಮಿಕರಿಗೆ ಸ್ಫೂರ್ತಿ ತರುತ್ತದೆ. ಇದು ಲೆನಿನ್ ತೋರಿಸಿದ ದಾರಿಯಲ್ಲಿ ಕಾರ್ಮಿಕ ವರ್ಗವು ಮುನ್ನಡೆಯುತ್ತಿದೆ.

"ಪಕ್ಷ ಮತ್ತು ಟ್ರೇಡ್‌ಯೂನಿಯನ್ ಒಂದೇ ಅಲ್ಲ"

(ಒಂದನೇ ಪುಟದಿಂದ)

ಮತ ಪಡೆಯಬಲ್ಲ ಇನ್ನೊಂದು ವಾಮ ಪಕ್ಷ ಇರಲಿ, ಇನ್ನೊಂದು ಬೂರ್ಜ್ವಾ ಪಕ್ಷವೂ ಇಲ್ಲದಿರುವ ಈ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಪಕ್ಷ ಮೂರು ರಾಜ್ಯಗಳಲ್ಲಿ ಬಹುಮತ ಪಡೆದಿರುವುದು ಒಂದು ದೊಡ್ಡ ಸಾಧನೆ. ಪಕ್ಷವಾಗಿಯೇನೋ ನಾವು ಸಾಕಷ್ಟು ಬೆಳೆಯುತ್ತಿದ್ದೇವೆ. ಆದರೆ ದೇಶದ ಟ್ರೇಡ್‌ಯೂನಿಯನ್ ಚಳುವಳಿ ಬೆಳೆಸಲು ಇನ್ನಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂದರು.

ಕಾರ್ಮಿಕರ ರಾಜಕೀಯ ಜಾಗೃತಿಗಿಂತ ಅವರ ಆರ್ಥಿಕ ಬೇಡಿಕೆಗಳ ಬಗ್ಗೆಯೇ ಟ್ರೇಡ್‌ಯೂನಿಯನ್‌ಗಳು ಹೆಚ್ಚು ಗಮನಕೊಡುತ್ತಿವೆ ಎಂಬ ಆಕ್ಷೇಪಣೆ ಎಲ್ಲ ಕಡೆ ಕೇಳಿಬರುತ್ತಿದೆ ಎಂದಾಗ ನಂಬೂದಿರಿಪಾದ್ ಆ ಪ್ರಶ್ನೆಯ ಧೋರಣೆಯನ್ನೇ ಅಲ್ಲಗಳೆದರು. ಟ್ರೇಡ್‌ಯೂನಿಯನ್ ಸಂಘಟನೆಯ ಸ್ವಭಾವವೇ ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ್ದು. ಪಕ್ಷ ಮತ್ತು ಕಾರ್ಮಿಕಸಂಘ ಒಂದೇ ಅಲ್ಲ. ಹಾಗೆ ನೋಡಬಾರದು. ಟ್ರೇಡ್‌ಯೂನಿಯನ್‌ಗಳ ಮೂಲಕವೇ ಕಾರ್ಮಿಕ ವರ್ಗವನ್ನು ಸಂಘಟಿಸಲು ಸಾಧ್ಯ. ಅವುಗಳೂ ರಾಜಕೀಯವಾಗಿ ಕಾರ್ಯಪ್ರವೃತ್ತವಾಗುತ್ತಿವೆ. ಆದರೆ ಇಂಥ ರಾಜಕೀಯ ಪಕ್ಷಕ್ಕೆ ಸೇರಿದ ಟ್ರೇಡ್ ಯೂನಿಯನ್ ಇದು ಎಂಬ ಮಾತೇ ಸರಿಯಲ್ಲ. ಕಾರ್ಮಿಕವರ್ಗದ ಪರವಾಗಿ ನಾನು ಹೇಳುವುದು ಟ್ರೇಡ್ ಯೂನಿಯನ್ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಬಾರದು ಎಂದು. ವರ್ಗಮೂಲವಾದ ಒಂದು ರಾಜಕೀಯ ಶಕ್ತಿಗೆ ಅದು ಅಂಗ ಸಂಸ್ಥೆಯಾಗಿರಬೇಕು. ಆದ್ದರಿಂದಲೇ ನಮ್ಮ ಪಕ್ಷ ಮತ್ತು ನಮ್ಮ ಸೆಂಟರ್ ಆಫ್ ಟ್ರೇಡ್‌ಯೂನಿಯನ್ಸ್, ಎಲ್ಲ ಕಾರ್ಮಿಕ ಸಂಘಗಳ ಐಕ್ಯತೆಯನ್ನು ಬಯಸುತ್ತವೆ. ಈ ಐಕ್ಯಸಂಘಟನೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೆ ಸೇರಿದ ಜನರೂ ಭಾಗ ವಹಿಸುತ್ತಾರೆ. ಟ್ರೇಡ್‌ಯೂನಿಯನ್ ಒಕ್ಕೂಟಕ್ಕೆ ಸಿ.ಐ.ಟಿ.ಯು. ಕರೆಕೊಟ್ಟಿದೆ. ಚಾರಿತ್ರಿಕವಾದ ಒಂದು ಕಾರಣದಿಂದ ನಾವು ಬೇರ್ಪಟ್ಟು ಸಿ. ಐ. ಟಿ.ಯು. ಸ್ಥಾಪಿಸಬೇಕಾದಾಗ, ಅದರ ಸ್ಥಾಪನಾಸಭೆಯಲ್ಲೇ ನಾವು ಒಂದು ಕೈಗಾರಿಕೆಗೆ ಒಂದೇ ಟ್ರೇಡ್‌ಯೂನಿಯನ್ ಇರಲೆಂದು ಎಂದರೆ ಇಡೀ ದೇಶಕ್ಕೆ ಒಂದೇ ಟ್ರೇಡ್‌ಯೂನಿಯನ್ ಕೇಂದ್ರವಿರಲೆಂದು ಕರೆ ಕೊಟ್ಟಿದ್ದೆವು. ಒಬ್ಬ ಕಾರ್ಮಿಕ, ರಾಜಕೀಯ ಚುನಾವಣೆಯಲ್ಲಿ ನನ್ನನ್ನು ವಿರೋಧಿಸಲಿ, ಆದರೆ ಟ್ರೇಡ್‌ಯೂನಿಯನ್ನಿನಲ್ಲಿ ಆತ ನನ್ನ ಸಹೋದ್ಯೋಗಿ. ಇದೇ ಟ್ರೇಡ್‌ಯೂನಿಯನ್ ಐಕ್ಯತೆ. ತಮ್ಮ ಸಂಘದ ಚುನಾವಣೆಗಳಲ್ಲಿ ಈಗಿರುವ ಬೇರೆಬೇರೆ ಟ್ರೇಡ್‌ಯೂನಿಯನ್‌ಗಳು ಪರಸ್ಪರ ಹೊಡೆದಾಡುತ್ತಿವೆ, ಆದರೆ ಬೋನಸ್, ಕೈಗಾರಿಕಾ ಸಂಬಂಧಗಳ ಮಸೂದೆ ಇಂತಹ ವಿಚಾರಗಳ ಬಗ್ಗೆ ಎಲ್ಲಾ ಒಂದಾಗುತ್ತವೆ. ಬೋನಸ್ ಹೇಗೆ ಅವರ ಸ್ವಂತ ಹಿತಾಸಕ್ತಿಯೋ ಸಮಾಜವಾದಿ ಕ್ರಾಂತಿಯೂ ಅವರದೇ ಹಿತಾಸಕ್ತಿಯಲ್ಲವೇ ಎಂದು ನಂಬೂದಿರಿಪಾದ್ ವಿವರಿಸಿದರು.

ಈ ಮಾತುಗಳೆಲ್ಲ ರೈತ ಸಂಘಟನೆ, ಮಹಿಳಾ ಸಂಘಟನೆಗಳಿಗೂ ಅನ್ವಯಿಸುತ್ತವೆ ಎಂದು ಇ. ಎಂ. ಎಸ್. ಹೇಳಿದರು. ಆದರೆ ಜಗತ್ತಿನ ಯಾವ ಕಮ್ಯುನಿಸ್ಟ್ ಚಳುವಳಿಯ ನೇತೃತ್ವದಲ್ಲೂ ಮಹಿಳೆಯರ ಪಾಲು ಹೆಚ್ಚಿಲ್ಲ ಎಂದು ನಾನು ದೂರಿದೆ. ಈ ಮಾತು ಪೂರ್ತಿಸರಿಯಲ್ಲ. ನಮ್ಮ ಪಕ್ಷದ ಕೇಂದ್ರ ಸಮಿತಿಯಲ್ಲಿ ಮೂವರು ಮಹಿಳಾ ಸದಸ್ಯರಿದ್ದಾರೆ ನಿಮಗೆ ಗೊತ್ತೇ ಎಂದರು. ಮಹಿಳೆಯರ ಪಾಲು ಹೆಚ್ಚಾಗಿಲ್ಲದಿರಬಹುದು. ಇದಕ್ಕೆ ಹಲವಾರು ಕಾರಣಗಳುಂಟು. ಗಂಡಸರು ಹೆಂಗಸರ ಬಗ್ಗೆ ತಳೆದಿರುವ ಧೋರಣೆಯೂ ಇದಕ್ಕೆ ಕಾರಣವಾಗಿರಬಹುದು. ಸಮಾಜದಲ್ಲಿ ಯಾವ ಭಾವನೆಗಳಿವೆಯೋ ಅವೆಲ್ಲ ಪಕ್ಷದಲ್ಲೂ ಪ್ರತಿಬಿಂಬಿತವಾಗುತ್ತದೆ. ಪ್ರಜಾಪ್ರಭುತ್ವವಾದಿ ಚಳುವಳಿ ಮತ್ತು ಕಾರ್ಮಿಕ ಚಳುವಳಿಗಳಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶಗಳನ್ನು ಕೊಡಬೇಕೆಂದು ನೀವು ಹೋರಾಡುತ್ತಿರುವುದು ಸರಿಯೇ. ಈ ದಿಸೆಯಲ್ಲಿ ನಾವು ಸಣ್ಣ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಸಿ.ಐ ಟಿ ಯು ಇದರಲ್ಲಿ ಉತ್ಸಾಹ ತಳೆದಿದೆ ಅದು ದುಡಿಯುವ ಮಹಿಳೆಯರನ್ನೇ ಪ್ರತ್ಯೇಕವಾಗಿ ಸಂಘಟಿಸುತ್ತಿದೆ. ಟ್ರೇಡ್‌ಯೂನಿಯನ್ ಸಂಘಟನೆ ದುಡಿಯುವ ಮಹಿಳೆಯರೂ ಸೇರಿದ ಇಡೀ ಕಾರ್ಮಿಕ ವರ್ಗದ್ದಲ್ಲವೇ ಎಂದು ನೀವು ಪ್ರಶ್ನಿಸಬಹುದು. ಆದರೆ ದುಡಿಯುವ ಮಹಿಳೆಯರು ಪ್ರತ್ಯೇಕವಾಗಿ ಸಂಘಟಿತರಾಗಿ ಕೊನೆಗೆ ಸಮಾಜವಾದಿ ಚಳುವಳಿಯಲ್ಲಿ ಒಂದಾಗುತ್ತಾರೆ ನಾವೀಗ ದುಡಿಯದ, ಸಾಮಾನ್ಯ ಮಹಿಳೆಯರನ್ನೂ ಅಖಿಲ ಭಾರತ ಮಟ್ಟದಲ್ಲಿ ಸಂಘಟಿಸಲು ನಿರ್ಧರಿಸಿದ್ದೇವೆ. ಕಾರ್ಮಿಕರಾಗಿಯಲ್ಲದೆಯೂ ಮಹಿಳೆಯರಿಗೆ ಅವರದೇ ಆದ ಸಮಸ್ಯೆಗಳಿಗೆ. ಅವರ ಸಂಘಟನೆ ಆಗಬೇಕು. ಇವೆಲ್ಲ ನಮ್ಮ ಸಣ್ಣ ಆರಂಭಿಕ ಪ್ರಯತ್ನಗಳಷ್ಟೇ. ಮಹಿಳೆಯರ ಪ್ರತ್ಯೇಕ ಸಂಘಟನೆಗಳಂತೆ ದಲಿತರ ಸಂಘಟನೆಗಳೂ ಆಗುವುದು ಒಳ್ಳೆಯದು, ಆದರೆ ಅವೆಲ್ಲದರ ಗುರಿ ಸಮಾಜವಾದಿ ಕ್ರಾಂತಿಯ ಜೊತೆ ಒಂದಾಗುವುದಾಗಿರಬೇಕು. ಇಡೀ ಕಾರ್ಮಿಕ ವರ್ಗದ ಐಕ್ಯತೆಯೊಳಗೆ ಈ ಎಲ್ಲ ಚಳುವಳಿಗಳೂ ಸೇರಬೇಕು ಎಂದು ನಂಬೂದಿರಿಪಾಡ್ ನುಡಿದರು.

ಎಲ್ಲ ಶೋಷಿತರ ಸಂಘಟನೆಗಳ ಗುರಿ ಒಂದೇ ಆಗಿರಬೇಕು ಎನ್ನುವ ಮುಖ್ಯ ಅಂಶವನ್ನು ಇ.ಎಂ.ಎಸ್. ಅವರ ಅಭಿಪ್ರಾಯಗಳು ಒತ್ತಿಹೇಳುತ್ತವೆ. ಸಂಘಟನೆಗಳ ನಾಯಕರು ಇದಕ್ಕೆ ಗಮನ ಹರಿಸುವುದು ಅಗತ್ಯ.

[Pr]inted by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT